19 ಅಕ್ಟೋಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 219 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ

ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರೊಂದಿಗೆ ತಮ್ಮ ಸಂಬಂಧ ಎಂದಿನಂತೆ ಗಟ್ಟಿಯಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಇತ್ತೀಚೆಗೆ ಹರಿದಾಡುತ್ತಿರುವ ವದಂತಿಗಳಂತೆ ಏನೂ ಆಗಿಲ್ಲ ಎಂದು ಭಾರತದ ಏಕದಿನ ಕ್ರಿಕೆಟ್ ತಂಡದ ನೂತನ ನಾಯಕ ಶುಭಮನ್ ಗಿಲ್ ಹೇಳಿದ್ದಾರೆ.




ಗೂಗಲ್ ಮ್ಯಾಪ್‌ಗೆ ಪರ್ಯಾಯ ಕಟ್ಟಿದ ರಾಕೇಶ್ ವರ್ಮಾ ! » 2


ದೀಪಗಳ ಹಬ್ಬ ದೀಪಾವಳಿ » 3


ಕಾಂಗ್ರೆಸ್‌ಗೆ ಆರ್‌ಎಸ್‌ಎಸ್ ಭಯ » 4

# ಕೈಗಾರಿಕೆ ಸ್ಥಾಪನೆಗೆ ರಾಜ್ಯ ಸರ್ಕಾರ ಅಸಹಕಾರ

## ಭೂಮಿ, ಮೂಲಸೌಲಭ್ಯ ಕಲ್ಪಿಸುವ ಕೆಲಸವಾಗುತ್ತಿಲ್ಲ | ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಆರೋಪ

• ಪ್ರಜೋದಯ ವರದಿ

**ಹಾಸನ:** ರಾಜ್ಯಕ್ಕೆ ಕೈಗಾರಿಕೆಗಳನ್ನು ತರಲು ಹಲವು ಬಾರಿ ಪ್ರಸ್ತಾವನೆ ಸಲ್ಲಿಸಿದ್ದರೂ, ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಗಂಭೀರ ಆರೋಪ ಮಾಡಿದರು.

ಶನಿವಾರ ಹೊಳೆನರಸೀಪುರ ಪಟ್ಟಣದ ಶ್ರೀಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಸಹಕಾರವೂ ಬೇಕು. ಈಗಾಗಲೇ 2 ವರ್ಷ ಕಳೆದರೂ ಕಿಂಚಿತ್ತು ಸಹಕಾರ ಸಿಕ್ಕಿಲ್ಲ. ಕೈಗಾರಿಕೆ ಸ್ಥಾಪನೆಗೆ ಭೂಮಿ ಕೊಡಬೇಕು, ಮೂಲಭೂತ ಸೌಕರ್ಯ ನೀಡಬೇಕಿದೆ. ಈ ಕೆಲಸ ಮಾಡುತ್ತಿಲ್ಲ ಎಂದು ದೂರಿದರು.

ಆರ್‌ಎಸ್‌ಎಸ್ ಕಾರ್ಯಕ್ರಮಗಳು ಸರ್ಕಾರಿ ಜಾಗದಲ್ಲಿ ನಡೆಸಲು ಕಡಿವಾಣ ಹಾಕಲು ಮುಂದಾಗಿರುವ ಸರ್ಕಾರ ಕ್ರಮಕ್ಕೆ ಪ್ರತಿಕ್ರಿಯಿಸಿ, ವಿರೋಧ ಪಕ್ಷವನ್ನು ಹಣಿಯುವ ಕೆಲಸವಷ್ಟೇ ಎಂದರು.

**ದೇವಾಲಯಗಳಲ್ಲಿ ವಿಶೇಷ ಪೂಜೆ**

ಎರಡು ದಿನಗಳಿಂದ ಜಿಲ್ಲಾ ಪ್ರವಾಸ ಕೈಗೊಂಡಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು, ಶುಕ್ರವಾರ ಜೆಡಿಎಸ್ ಶಾಸಕರೊಂದಿಗೆ ಹಾಸನಾಂಬ ದೇವಿ ದರ್ಶನ ಪಡೆದರು. ಬಳಿಕ ಹಾಸನದಲ್ಲಿ ನಿರ್ಮಾಣಗೊಳ್ಳುತ್ತಿರುವ ಮೆಗಾ ಡೇರಿ ಕಾಮಗಾರಿ ವೀಕ್ಷಣೆ ಮಾಡಿದರು. ರಾತ್ರಿ ಖಾಸಗಿ ರೆಸಾರ್ಟ್‌ನಲ್ಲಿ ಪಕ್ಷದ ಶಾಸಕರು, ಪ್ರಮುಖರೊಂದಿಗೆ ಪಕ್ಷ ಸಂಘಟನೆ ಕುರಿತು ಚರ್ಚೆ ನಡೆಸಿದರು.



ಶನಿವಾರ ಬೆಳಿಗ್ಗೆ ಪತ್ನಿ ಸಮೇತ ತಮ್ಮ ಹುಟ್ಟೂರಿಗೆ ಆಗಮಿಸಿದ ಅವರು, ವಿವಿಧ ದೇವಾಲಯಗಳಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಸಹೋದರ ಹೆಚ್.ಡಿ.ರೇವಣ್ಣ ಅವರು ಜೊತೆಗಿದ್ದರು.

ಸ್ವಗ್ರಾಮ ಹರದನಹಳ್ಳಿ ಈಶ್ವರ ದೇವಾಲಯ ಹಾಗು ಹಳೆಕೋಟೆ ಗ್ರಾಮದ ಮಾವಿನಕೆರೆ ಬೆಟ್ಟದ ಮೇಲಿನ ಶ್ರೀರಂಗನಾಥ ಸನ್ನಿಧಿಯಲ್ಲಿ ಪೂಜೆ, ಹೋಮ, ಹವನ ನಡೆಸಿದರು. ಅದಾದ ಬಳಿಕ ಪಟ್ಟಣದ ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ವೇದ ಮಂತ್ರ ಘೋಷಗಳೊಂದಿಗೆ ಪೂರ್ಣ ಕುಂಭ ಸ್ವಾಗತ ನೀಡಿ ಬರಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಲಕ್ಷ್ಮೀ ನರಸಿಂಹಸ್ವಾಮಿಗೆ ವಿಶೇಷ ಪೂಜಾ ಕೈಂಕರ್ಯ ಕೈಗೊಳ್ಳಲಾಯಿತು.

ಪುರಸಭೆ ಅಧ್ಯಕ್ಷ ಹೆಚ್.ಕೆ.ಪ್ರಸನ್ನ, ತಹಶೀಲ್ದಾರ್ ರೇಣುಕುಮಾರ್, ಪುರಸಭೆ ಮುಖ್ಯಾಧಿಕಾರಿ ಶಿವಶಂಕರ್, ಅಭಿಮಾನಿಗಳು, ಭಕ್ತಾಧಿಗಳು ಉಪಸ್ಥಿತರಿದ್ದರು.

> **ಹೆಚ್.ಡಿ.ದೇವೇಗೌಡರು ಅಧಿಕಾರ ಕಂಡಿದ್ದು ಬಹಳ ಕಡಿಮೆ ಅವಧಿ. ಅವರು ರಾಜ್ಯದ ಅಭಿವೃದ್ಧಿ ಕುರಿತಂತೆ ಕಂಡಿದ್ದ ಕನಸು ನನಸು ಮಾಡುವ ಪ್ರಯತ್ನ ಮಾಡಿ ದ್ದೇನೆ. ನಾನೂ ಸಹ 2 ಬಾರಿ ಮುಖ್ಯ ಮಂತ್ರಿಯಾಗಿದ್ದರೂ, ಬೇರೆ ಪಕ್ಷಗಳ ಬೆಂಬಲ ಪಡೆದು ಅತ್ಯಂತ ಕಡಿಮೆ ಅವಧಿ ಅಧಿಕಾರದಲ್ಲಿ ಅದ್ದರಿಂದ ಅಂದುಕೊಂಡ ಕೆಲಸಗಳನ್ನು ಮಾಡಲು ಆಗಿಲ್ಲ.**
> **-ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ**

### ಕಾರ್ಯಕರ್ತರೊಂದಿಗೆ ಸಭೆ: ಹುಮ್ಮಸ್ಸು



**ಅನಾರೋಗ್ಯದ ಕಾರಣ ಹಲವು ತಿಂಗಳ ನಂತರ ಜಿಲ್ಲೆಗೆ ಆಗಮಿಸಿ ಎರಡು ದಿನಗಳ ವಾಸ್ತವ್ಯ ಹೂಡಿ, ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆ ಬಗ್ಗೆ ಸಭೆ ನಡೆಸಿರುವುದು ಜೆಡಿಎಸ್ ಕಾರ್ಯಕರ್ತರು, ಮುಖಂಡರಲ್ಲಿ ಉತ್ಸಾಹ ತುಂಬಿದೆ.**

**ಶನಿವಾರ ಹೊಳೆನರಸೀಪುರ ತಾಲ್ಲೂಕಿಗೆ ಆಗಮಿಸಿದ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕಂಡು ಅಭಿಮಾನಿಗಳು ನೂರಾರು ಸಂಖ್ಯೆಯಲ್ಲಿ ಸೇರಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಕುಮಾರಸ್ವಾಮಿ ಅವರೊಂದಿಗೆ ಯುವಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಶಾಸಕರ ದಂಡು ಜಿಲ್ಲೆಗೆ ಆಗಮಿಸುವ ಮೂಲಕ ಹಲವು ಕಹಿ ಘಟನೆಗಳಿಂದ ಕುಗ್ಗಿದ್ದ ಕಾರ್ಯಕರ್ತರು, ಮುಖಂಡರಿಗೆ ಹೊಸ ಹುರುಪು ನೀಡಿದೆ.**

# ದೇವೇಗೌಡರ ಭೇಟಿಯಾದ ಶ್ರವಣಬೆಳಗೊಳ ಶ್ರೀ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಶ್ರವಣಬೆಳಗೊಳ ಮಠದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರು ಬೆಂಗಳೂರಿನಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರನ್ನು ಭೇಟಿಯಾಗಿ ಯೋಗ ಕ್ಷೇಮ ವಿಚಾರಿಸಿದರು.

ದೇವರ ಪ್ರಸಾದ, ಶ್ರೀಮಠದ ಫಲ ತಾಂಬೂಲ, ಪುಷ್ಪಮಾಲೆಯೊಂದಿಗೆ ಪದ್ಮನಾಭ ನಗರದಲ್ಲಿರುವ ದೇವೇಗೌಡರ ಮನೆಗೆ ತೆರಳಿದ ಅಭಿನವ ಚಾರುಶ್ರೀಗಳು, ಹೆಚ್‌ಡಿಡಿ ಅವರ ಹಣೆ ಹಾಗು ತಲೆಗೆ ತಾವೇ ಗಂಧೋದಕ ಹಚ್ಚಿ ಬೇಗ ಮೊದಲಿನಂತಾಗಿ ಎಂದು ಹರಸಿದರು.

ಈ ವೇಳೆ ದೇವೇಗೌಡರಿಗೆ ದೇವರ ಪ್ರಸಾದ ನೀಡಿ, ಅವರ ತಲೆಯ ಮೇಲೆ ಹೂ ಇಟ್ಟು, ನಿಮ್ಮ ಆಯಸ್ಸು ಮತ್ತಷ್ಟು ವೃದ್ಧಿಯಾಗಲಿ, ನಿಮ್ಮಿಂದ ಜಿಲ್ಲೆ, ನಾಡು, ದೇಶಕ್ಕೆ ಇನ್ನಷ್ಟು ಅಮೂಲ್ಯ ಸೇವೆ ದೊರಕುವಂತಾಗಲಿ. ಆ ಶಕ್ತಿಯನ್ನು ಭಗವಾನ್ ಬಾಹುಬಲಿ ಸ್ವಾಮಿ ಕರುಣಿಸಲಿ ಎಂದು ಪ್ರಾರ್ಥಿಸಿರುವುದಾಗಿ ತಿಳಿಸಿದರು. ಕೈ ಮುಗಿದು ಗುರುವಂದನೆ ಸಲ್ಲಿಸಿದ ದೇವೇಗೌಡ, ಜಿನೈಕ್ಯರಾದ ಕರ್ಮಯೋಗಿ, ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರ ಕೊಡುಗೆ, ಬಾಂಧವ್ಯ ಸ್ಮರಿಸಿದರು.




# ದೇಶಭಕ್ತರನ್ನು ಕೆಣಕಿ ಉಳಿದವರಿಲ್ಲ: ವಿಜಯೇಂದ್ರ

• ಪ್ರಜೋದಯ ವರದಿ



**ಬೆಂಗಳೂರು:** ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ಪಾಳೇಗಾರಿಕೆ ರಾಜಕಾರಣ ಅಟ್ಟಹಾಸ ಮೆರೆಯುತ್ತಿದೆ. ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನ ಮಾಡಲು ಸರ್ಕಾರಿ ಅಧಿಕಾರಿಗಳನ್ನು ಬಳಸಿಕೊಳ್ಳಲಾಗುತ್ತಿದೆಯೆಂದು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ವಾಗ್ದಾಳಿ ನಡೆಸಿದ್ದಾರೆ.

ಆರ್‌ಎಸ್‌ಎಸ್ ಶತಮಾನ ಪೂರೈಸಿದ ಸಂಭ್ರಮ ಆಚರಿಸಲು ಸಂಘ ಹಾಗು ಹಿಂದೂಪರ ಸಂಘಟನೆಗಳು ನಿಯಮಾನುಸಾರ ಅನುಮತಿ ಪಡೆದು ಆಯೋಜಿಸಿದ್ದ ಸಂಘದ ಪಥ ಸಂಚಲನ ಕಾರ್ಯಕ್ರಮದ ಮೇಲೆ ಕೆಂಗಣ್ಣು ಬೀರಿರುವ ಸ್ಥಳೀಯ ಶಾಸಕರೂ ಆಗಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು ದ್ವೇಷ ರಾಜಕಾರಣವನ್ನು ಮುಂದುವರೆಸಿದ್ದಾರೆಂದು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಅನುಮತಿ ಪಡೆದು ಕಟ್ಟಲಾಗಿದ್ದ ಭಗವಾಧ್ವಜಗಳು, ಬ್ಯಾನರ್‌ಗಳನ್ನು ಕಿತ್ತೆಸೆದಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಣಕಿಸುವಂತಿದೆ. ಆರ್‌ಎಸ್‌ಎಸ್ ಶತಮಾನೋತ್ಸವದ ಆಚರಣೆಯನ್ನು ದುರುದ್ದೇಶ ಪೂರ್ವಕವಾಗಿ ತಡೆಯಲು ಯತ್ನಿಸಿರುವ ಘಟನೆ ಅತ್ಯಂತ ಖಂಡನೀಯವೆಂದು ಅವರು ಕಿಡಿಕಾರಿದ್ದಾರೆ.

ಚಿತ್ತಾಪುರದಿಂದ ನಿಯಂತ್ರಿಸುತ್ತಿರುವ ರಿಪಬ್ಲಿಕ್ ಆಫ್ ಕಲಬುರಗಿಯನ್ನು ಧಿಕ್ಕರಿಸಿ ಪ್ರಜಾ ಪ್ರಭುತ್ವ ಹಾಗು ಸಂವಿಧಾನದ ಘನತೆಯನ್ನು ಎತ್ತಿ ಹಿಡಿಯಲು ಬಿಜೆಪಿ ಜನರ ಧ್ವನಿಯಾಗಿ ಹೋರಾಡಲಿದೆ ಎಂದರು.

# ಜಾತ್ರೆಗೆ ಉಸ್ತುವಾರಿ ಸಚಿವರಿಂದ ಹೊಸ ಕಾಯಕಲ್ಪ

## ಹಾಸನಾಂಬ ದರ್ಶನ ಪಡೆದು ಪ್ರೀತಮ್‌ಗೌಡ ಮೆಚ್ಚುಗೆ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನಕ್ಕೆ ಈ ಬಾರಿ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಹೊಸ ಕಾಯಕಲ್ಪ ಮಾಡಿದ್ದಾರೆ. ಅತೀ ಹೆಚ್ಚು ಭಕ್ತರು ಬರುತ್ತಿದ್ದಾರೆ ಅದರ ನಡುವೆಯೂ ಕೆಲ ಸವಾಲುಗಳು ಇವೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪ್ರೀತಮ್ ಜೆ.ಗೌಡ ಅವರು ಹೇಳಿದರು.



ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಾಸನಾಂಬ ದರ್ಶನಕ್ಕೆ ಬರುತ್ತಿರುವ ಎಲ್ಲಾ ಭಕ್ತರಿಗೂ ಸ್ವಾಗತ ಕೋರುತ್ತೇನೆ. ನಾನು ಕೂಡ ಐದು ವರ್ಷ ಶಾಸಕನಾಗಿ ದಿನಕ್ಕೆ 18, 20 ಗಂಟೆ ಕೆಲಸ ಮಾಡಿದ್ದೇನೆ, ನಾವಿದ್ದಾಗ ಒಂದು ರೀತಿ ಬದಲಾವಣೆ ಆಗಿತ್ತು, ವರ್ಷದಿಂದ ವರ್ಷಕ್ಕೆ ಕೆಲ ಬದಲಾವಣೆಗಳು ಆಗುತ್ತಲೇ ಇವೆ. ಈ ಬಾರಿಯ ವ್ಯವಸ್ಥೆಗೆ ಉಸ್ತುವಾರಿ ಸಚಿವರ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಿದ್ದೇವೆ. ಹಾಸನಕ್ಕೆ ಒಳ್ಳೆಯ ಹೆಸರು ಬರಲಿ ಎನ್ನೋದು ನಮ್ಮ ಕೋರಿಕೆ ಮತ್ತು ಬೇಡಿಕೆ ಎಂದರು.

**ಮಾತನಾಡುವಾಗ ಜವಾಬ್ದಾರಿ ಇರಲಿ**

ಧರ್ಮ ರಕ್ಷಣೆ, ರಾಷ್ಟ್ರೀಯತೆ ಬಗ್ಗೆ ಅಪಾರ ಶಕ್ತಿ ಮತ್ತು ಕಲ್ಪನೆ ನೀಡುತ್ತಿರುವುದು ಆರ್‌ಎಸ್‌ಎಸ್. ಆ ಬಗ್ಗೆ ಮಾತನಾಡುವಾಗ ಜವಾಬ್ದಾರಿ ಇರಬೇಕೆಂದು. ಒಂದು ವರ್ಗವನ್ನು ಓಲೈಸುವ ಬದಲು ಮಾನಸಿಕತೆ ಬದಲಾಗಬೇಕು. ಆರ್‌ಎಸ್‌ಎಸ್ ಕಾರ್ಯ ಶೈಲಿ ಯಾವ ರೀತಿ ಇದೆ, ಹೇಗೆ ಕೆಲಸ ಮಾಡುತ್ತಿದೆ ನೋಡಲಿ. ರಾಷ್ಟ್ರದ ಅಖಂಡತೆ ಮತ್ತು ಯುವ ಸಮುದಾಯದಲ್ಲಿ ದೇಶಪ್ರೇಮ ಬೆಳೆಸುವ ಕೆಲಸ ಮಾಡುತ್ತಿದೆ. ಅದರ ಬಗ್ಗೆ ಯಾರೂ ಕೂಡ ಹಗುರವಾಗಿ ಮಾತನಾಡಬಾರದು ಎಂದು ತಿಳಿಸಿದರು.

» ನಾಲ್ಕನೇ ಪುಟದಲ್ಲಿ

## ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರ ಆಗಮನ | ಗಂಟೆಗಟ್ಟಲೆ ಸಾಲಿನಲ್ಲಿ ನಿಂತು ದರ್ಶನ

# 9ನೇ ದಿನವೂ ಹಾಸನಾಂಬ ದರ್ಶನೋತ್ಸವಕ್ಕೆ ಜನ ಸಾಗರ

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದೇವಿ ದರ್ಶನದ 9ನೇ ದಿನವಾದ ಶನಿವಾರವೂ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ಗಂಟೆಗಟ್ಟಲೆ ಸರದಿ ಸಾಲಿನಲ್ಲಿ ನಿಂತು ದರ್ಶನ ಪಡೆದು ಕೊಂಡರು.

ವಾರಾಂತ್ಯ, ಸಾಲು ಸಾಲು ರಜೆಗಳು ಹಾಗು ಇನ್ನು ನಾಲ್ಕು ದಿನಗಳಲ್ಲಿ ದರ್ಶನೋತ್ಸವ ಮುಕ್ತಾಯಗೊಳ್ಳಲಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸುತ್ತಿದ್ದಾರೆ. ಶುಕ್ರವಾರಕ್ಕೆ ಹೋಲಿಸಿದೆ ಶನಿವಾರ ಭಕ್ತರ ಸಂಖ್ಯೆ ಕೊಂಚ ಕಡಿಮೆ ಇತ್ತು. 1 ಸಾವಿರ ರೂ. ವಿಶೇಷ ದರ್ಶನದ ಟಿಕೆಟ್ ಪಡೆದವರು 1 ರಿಂದ 2 ಗಂಟೆಯಲ್ಲಿ ದರ್ಶನ ಪಡೆದರು. 300 ರೂ. ಟಿಕೆಟ್ ಪಡೆದವರು 3 ರಿಂದ 4 ಗಂಟೆ, ಧರ್ಮ ದರ್ಶನದ ಸಾಲಿನಲ್ಲಿ ನಿಂತಿದ್ದ ಭಕ್ತರು 6 ರಿಂದ 7 ಗಂಟೆಯಲ್ಲಿ ದರ್ಶನ ಪಡೆದುಕೊಂಡು ಮರಳಿದರು. ಮುನ್ನೆಚ್ಚರಿಕೆ ಧರ್ಮ ದರ್ಶನ ಸಾಲಿನ ಬ್ಯಾರಿಕೇಡ್‌ಗಳನ್ನು 10 ಕಿಲೋ.ಮೀಟರ್‌ವರೆಗೆ ವಿಸ್ತರಿಸುವ ಮೂಲಕ ಭಕ್ತರ ಸುರಕ್ಷತೆ ಮತ್ತು ಸುಗಮ ದರ್ಶನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ.



### ಮೊದಲ ಬಾರಿಗೆ ದರ್ಶನ ಪಡೆದ ಸಿಎಂ ಪತ್ನಿ

**ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಸಿದ್ದರಾಮಯ್ಯ ಅವರು ಇದೇ ಮೊದಲ ಬಾರಿಗೆ ಹಾಸನಾಂಬ ದರ್ಶನೋತ್ಸವದಲ್ಲಿ ಭಾಗವಹಿಸಿ ದೇವಿ ದರ್ಶನ ಪಡೆದರು. ತಮ್ಮ ಆಪ್ತರೊಂದಿಗೆ ಶನಿವಾರ ಬೆಳಿಗ್ಗೆ ಹಾಸನಾಂಬ ದೇವಾಲಯಕ್ಕೆ ಆಗಮಿಸಿದ ಅವರು, ಭಕ್ತರ ಸಾಲಿನಲ್ಲಿ ದೇವಿಯ ದರ್ಶನ ಪಡೆದ ಬಳಿಕ ಸಿದ್ದೇಶ್ವರಸ್ವಾಮಿ ದೇವಾಲಯಕ್ಕೂ ಭೇಟಿ ನೀಡಿದರು. ದರ್ಶನ ಸಮಯದಲ್ಲಿ ದೇವಾಲಯದ ಆವರಣದಲ್ಲಿ ಅವರ ಫೋಟೋ, ವಿಡಿಯೋ ಚಿತ್ರೀಕರಣಕ್ಕೆ ಅವಕಾಶ ನೀಡಲಿಲ್ಲ.**

> **ದೇವರ ದರ್ಶನ ಪಡೆಯಲು ಕನಿಷ್ಠ 7 ಗಂಟೆಗೂ ಹೆಚ್ಚಿನ ಅವಧಿ ಕಾಯುವಂತಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಜನ ಸಂದಣಿ ಉಂಟಾಗಲಿದ್ದು, ದೇವರ ದರ್ಶನ ಮತ್ತಷ್ಟು ತಡವಾಗಬಹುದು. ಹೀಗಾಗಿ ದೇವಾಲಯಕ್ಕೆ ಆಗಮಿಸುವ ಭಕ್ತಾಧಿಗಳು ಇಂತಹ ಸಂದರ್ಭಕ್ಕೆ ತಯಾರಾಗಿ ಬನ್ನಿ.**
> **-ಕೃಷ್ಣಬೈರೇಗೌಡ,** ಜಿಲ್ಲಾ ಉಸ್ತುವಾರಿ ಸಚಿವ

**ಶಿಷ್ಟಾಚಾರ ದರ್ಶನದಲ್ಲಿ ಬದಲಾವಣೆ**

ಭಕ್ತರ ದರ್ಶನಕ್ಕೆ ಅಡ್ಡಿಯಾಗದಂತೆ ಜಿಲ್ಲಾಡಳಿತವು ಶಿಷ್ಟಾಚಾರ ದರ್ಶನ ನಿಯಮದಲ್ಲಿ ಬದಲಾವಣೆ ತಂದಿದೆ. ಸಚಿವರು, ಶಾಸಕರ ಶಿಷ್ಟಾಚಾರ ಪತ್ರ ಹೊಂದಿದ್ದರೂ, ಸಚಿವರು, ಶಾಸಕರು ಸ್ವತಃ ಹಾಜರಿಲ್ಲದಿದ್ದರೆ ಅವರ ಕುಟುಂಬ ಸದಸ್ಯರಿಗೆ ಶಿಷ್ಟಾಚಾರದ ದರ್ಶನಕ್ಕೆ ಅವಕಾಶವಿಲ್ಲ ಎಂದು ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ಸೂಚನೆಯಂತೆ ದೇವಾಲಯ ಸಮಿತಿಯ ಆಡಳಿತಾಧಿಕಾರಿ ಮಾರುತಿ ಅವರು ಆದೇಶ ಹೊರಡಿಸಿದ್ದಾರೆ.



**ಮುಂಜಾನೆ ವರೆಗೆ 3.70 ಲಕ್ಷ ಜನರಿಗೆ ದರ್ಶನ**

ಶುಕ್ರವಾರ ಬೆಳಿಗ್ಗೆಯಿಂದ ಶನಿವಾರ ಬೆಳಿಗ್ಗೆ ವರೆಗೆ 3.70 ಲಕ್ಷ ಜನ

» ನಾಲ್ಕನೇ ಪುಟದಲ್ಲಿ

## ಆಟೋ ಪಲ್ಟಿ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಸು ಸಾಗಿಸುತ್ತಿದ್ದ ಆಟೋದಲ್ಲಿ ಹಸು ಬೆದರಿ ಜೋರಾಗಿ ಅಲುಗಾಡಿದ್ದರಿಂದ ನಿಯಂತ್ರಣ ತಪ್ಪಿ ಪಲ್ಟಿಯಾಗಿ ಚಾಲಕನ ಪಕ್ಕ ಕುಳಿತಿದ್ದ ವ್ಯಕ್ತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೇಡಿಗನಹಳ್ಳಿ ಗೇಟ್ ಸಮೀಪ ನಡೆದಿದೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ಹರಳಹಳ್ಳಿ ಗ್ರಾಮದ ಗುರುಲಿಂಗೇಗೌಡ (61) ಮೃತರು.

ಚನ್ನರಾಯಪಟ್ಟಣ ಸಂತೆಯಲ್ಲಿ ಮಾರಾಟ ಮಾಡಲು ಬಲ್ಲವಳ್ಳಿ ಗ್ರಾಮದಿಂದ ಹಸು ತರುತ್ತಿದ್ದರು. ಬೇಡಿಗನಹಳ್ಳಿ ಗೇಟ್ ಹತ್ತಿರ ಆಟೋ ಬಾಡಿಯು ಹಸು ಬೆದರಿ ಜೋರಾಗಿ ಅಲುಗಾಡಿದಾಗ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಎಡಬದಿಗೆ ಪಲ್ಟಿಯಾಗಿ ಬಿದ್ದಿದ್ದರು. ಅಪಘಾತದಲ್ಲಿ ಗಂಭೀರ ಗಾಯಗೊಂಡಿದ್ದ ಚಾಲಕ ಮಂಜೇಗೌಡ ಹಾಗು ಗುರುಲಿಂಗೇಗೌಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಿಸದೆ ವ್ಯಕ್ತಿ ಮೃತ ಪಟ್ಟಿದ್ದಾರೆ. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಸರ್ಕಾರಕ್ಕೆ ಕಣ್ಣು, ಕಿವಿ ಇಲ್ಲ: ಸುನಿಲ್ ಕುಮಾರ್ ಟೀಕೆ

• ಪ್ರಜೋದಯ ವರದಿ

**ಹಾಸನ:** ಹುಟ್ಟು ಕುರುಡರು, ಕಿವುಡರಿಗೆ ಅಧಿಕಾರ ನೀಡಿದ್ದರೂ ಜನರ ಕಷ್ಟ ಅರ್ಥವಾಗುತ್ತಿತ್ತು. ಆದರೆ, ಈ ಸರ್ಕಾರಕ್ಕೆ ಕಣ್ಣು ಕಾಣುವುದಿಲ್ಲ, ಕಿವಿಯೂ ಕೇಳುವುದಿಲ್ಲ ಎಂದು ಮಾಜಿ ಸಚಿವ ಸುನಿಲ್ ಕುಮಾರ್ ಅವರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶನಿವಾರ ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಸರ್ಕಾರದ ಅವಧಿಯಲ್ಲಿ ರಾಜ್ಯದ ಅಭಿವೃದ್ಧಿ ಮರೀಚಿಕೆಯಾಗಿದೆ. ಜನರ ಸಮಸ್ಯೆಗಳಿಗೆ ಸ್ಪಂದಿಸಬೇಕಾದ ಸಚಿವರು, ಅನ್ಯ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಸ್ವಭಾವ ಬೆಳೆಸಿಕೊಂಡಿದ್ದಾರೆ.



ಕಳೆದ ಎರಡೂವರೆ ವರ್ಷಗಳಲ್ಲಿ ಅಭಿವೃದ್ಧಿಯನ್ನು ಎಲ್ಲೂ ನೋಡಲು ಸಾಧ್ಯವಿಲ್ಲ ಎಂದು ಹೇಳಿದರು.

ಇದು ಬಾಯಿಬಡುಕ ಸರ್ಕಾರ. ಕೇವಲ ಮಾಧ್ಯಮಗಳ ಮುಂದೆ ಬಂದು ಸರ್ಕಾರಕ್ಕೆ ಸಂಬಂಧವಿಲ್ಲದ ವಿಷಯಗಳ ಕುರಿತು ಬಾಯಿ ಬಡಿದುಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಸರ್ಕಾರಿ ನೌಕರರ ಆತ್ಮಹತ್ಯೆಗಳ ವಿಷಯ ಪ್ರಸ್ತಾಪಿಸಿ ಅವರು, ಈ ಸರ್ಕಾರದ ಅವಧಿಯಲ್ಲಿ 18ಕ್ಕೂ ಹೆಚ್ಚು ಸರ್ಕಾರಿ ನೌಕರರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಶುಕ್ರವಾರವೂ ಚಾಮರಾಜ ನಗರದಲ್ಲಿ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೆ ಯಾವುದೇ ಸಂವೇದನಶೀಲತೆ ಇಲ್ಲವೆಂದು ಆರೋಪಿಸಿದರು.

ರಾಜ್ಯದಲ್ಲಿ ಗುತ್ತಿದಾರರು ಸರ್ಕಾರಕ್ಕೆ ಗಡುವು ಕೊಡುವ ಪರಿಸ್ಥಿತಿ ಬಂದಿದೆ. 33 ಸಾವಿರ ಕೋಟಿ ರೂ. ಬಾಕಿಯಾಗಿದೆ. ಇಂತಹ ಭ್ರಷ್ಟ

» ನಾಲ್ಕನೇ ಪುಟದಲ್ಲಿ

## ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯವಿಲ್ಲದೆ ಸಾರ್ವಜನಿಕರ ಪರದಾಟ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಬೇರೆ ಮಾರ್ಗಕ್ಕೆ ನಿಯೋಜಿಸಿದ್ದರಿಂದ ಶನಿವಾರ ಸಾರಿಗೆ ಬಸ್‌ಗಳಿಲ್ಲದೆ ಸಾರ್ವಜನಿಕರು ಹಾಗು ಶಾಲಾ-ಕಾಲೇಜು ವಿದ್ಯಾರ್ಥಿಗಳು ಪರದಾಡಬೇಕಾಯಿತು.

ಹಾಸನ ಹಾಗು ಚನ್ನರಾಯಪಟ್ಟಣ ಕಡೆಗೆ ಶನಿವಾರ ಬೆಳಿಗ್ಗೆ 10 ಗಂಟೆವರೆಗೆ ಬಸ್‌ಗಳಿಲ್ಲದೆ

» ನಾಲ್ಕನೇ ಪುಟದಲ್ಲಿ

# ದೇಶಭಕ್ತಿ ಇಷ್ಟಪಡದವರಿಂದ ಆರ್‌ಎಸ್‌ಎಸ್ ವಿರೋಧ

## ಪ್ರಿಯಾಂಕ್ ಖರ್ಗೆ ವಿರುದ್ಧ ಎಂಎಲ್‌ಸಿ ರವಿಕುಮಾರ್ ಟೀಕೆ

• ಪ್ರಜೋದಯ ವರದಿ

**ಹಾಸನ:** ಒಂದು ಧರ್ಮ, ದೇಶಭಕ್ತಿ, ಶಿಸ್ತನ್ನು ಇಷ್ಟಪಡದವರು ಮಾತ್ರ ಆರ್‌ಎಸ್‌ಎಸ್ ವಿರೋಧಿಸುತ್ತಾರೆಂದು ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಅವರು ಟೀಕಿಸಿದರು.

ಶನಿವಾರ ಹಾಸನಾಂಬ ದೇವಿ ದರ್ಶನ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ದೇವರು ಖಂಡಿತ ಒಳಿತು ಮಾಡುವುದಿಲ್ಲ. ಈ ಮಾತನ್ನು ಅವರ ತಂದೆ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಹೇಳುತ್ತಿಲ್ಲ ಎಂದರು.

ಆರ್‌ಎಸ್‌ಎಸ್ ಈ ದೇಶಕ್ಕೆ ಏನು ಕೆಡುಕು ಮಾಡಿದೆ. ಈ ದೇಶವನ್ನು ಪ್ರೀತಿಸುವ, ಇಷ್ಟ ಪಡುವ ಯಾರಿಗೂ ಆರ್‌ಎಸ್‌ಎಸ್‌ನಿಂದ ತೊಂದರೆಯಾಗಿಲ್ಲ, ಯಾರಿಗೂ ಕೆಟ್ಟದು ಮಾಡಿಲ್ಲ. ಈ ದೇಶಕ್ಕೆ ನಿಷ್ಠರಾಗಿರಿ, ಜನರಿಗೆ ಒಳ್ಳೆಯದನ್ನು ಮಾಡಿ ಎಂದು ಹೇಳುತ್ತಿದೆ. ಅದನ್ನು ಹೇಳುವುದು ತಪ್ಪೇ ಎಂದು ಪ್ರಶ್ನಿಸಿದರು.



ನಾಥೂರಾಮ್ ಗೂಡ್ಸೆ ಆರ್‌ಎಸ್‌ಎಸ್ ಮೂಲ ಎಂಬ ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿ, ಅದು ಕಾಂಗ್ರೆಸ್‌ನವರ ಹೇಳಿಕೆಯಷ್ಟೇ. ಅಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರಚನೆಯಾದ ತನಿಖಾ ಸಮಿತಿಯ ಎಲ್ಲಾ ವರದಿಗಳಲ್ಲಿ ಗಾಂಧಿ ಹತ್ಯೆಯಲ್ಲಿ ಆರ್‌ಎಸ್‌ಎಸ್ ಪಾತ್ರವಿಲ್ಲ ಎಂದು ಹೇಳಿವೆ. ಸುಪ್ರೀಂಕೋರ್ಟ್ ತೀರ್ಪು ಕೂಡ ಇದೇ ಆಗಿದೆ. ಈ ರೀತಿಯ ಆರೋಪ ಖಂಡನೀಯ ಎಂದು ಹೇಳಿದರು.

ಆರ್‌ಎಸ್‌ಎಸ್ ಚಟುವಟಿಕೆಯಲ್ಲಿ ಭಾಗಿಯಾಗಿದ್ದಕ್ಕಾಗಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಪ್ರವೀಣ್ ಕುಮಾರ್ ಎಂಬುವವರನ್ನು ಅಮಾನತು ಮಾಡಲಾಗಿದೆ. ಅವರು ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರಾ, ಏನು ತಪ್ಪು ಮಾಡಿದ್ದಾರೆ ಎಂದು ಪ್ರಶ್ನಿಸಿದ ಅವರು, ರಜೆ ದಿನಗಳಲ್ಲಿ ಶಾಲಾ-ಕಾಲೇಜು ಮೈದಾನಗಳನ್ನು ಬಳಸಿಕೊಳ್ಳುವುದರಲ್ಲಿ ತಪ್ಪೇನಿದೆ. ಸಮಾಜದ ಚಟುವಟಿಕೆಗಳಿಗೆ ಸರ್ಕಾರಿ ಮೈದಾನ, ಕಟ್ಟಡಗಳನ್ನು ಬಳಸಿಕೊಳ್ಳಬೇಕು. ಆರ್‌ಎಸ್‌ಎಸ್ ಮಾತ್ರವಲ್ಲ ಎಲ್ಲಾ ಸಂಘ-ಸಂಸ್ಥೆಗಳ ಕಾರ್ಯ ಚಟುವಟಿಕೆಗಳಿಗೆ ನೀಡಬೇಕೆಂದು ಒತ್ತಾಯಿಸಿದರು.

## ಸಚಿವ ಪರಮೇಶ್ವರ್‌ಗೆ ಮೀಸಲು ಕ್ಷೇತ್ರವೇ ಯಾಕೆ ಬೇಕು: ರಾಜಣ್ಣ ಪ್ರಶ್ನೆ

# ನಮಾಜ್ ಮಾಡಲು ಅನುಮತಿ ಪಡೆಯುವರೇ

• ಪ್ರಜೋದಯ ವರದಿ



**ತುಮಕೂರು:** ಸಾರ್ವಜನಿಕ ಸ್ಥಳಗಳಲ್ಲಿ ಕಾರ್ಯಕ್ರಮ ಆಯೋಜಿಸಲು ಅನುಮತಿ ಪಡೆದು ಕೊಳ್ಳುವುದು ಸರ್ಕಾರದ ಅನುಮತಿ ಕಡ್ಡಾಯಕ್ಕೆ ಕಾಂಗ್ರೆಸ್ ಶಾಸಕರೇ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರು, ಈದ್ಗಾ ಮೈದಾನ, ರಸ್ತೆಯಲ್ಲಿ ನಮಾಜ್ ಮಾಡಲು ಮುಸ್ಲಿಮರು ಅನುಮತಿ ಪಡೆದುಕೊಳ್ಳುತ್ತಾರೆಯೇ ಅದನ್ನು ತಡೆಯಲು ಸಾಧ್ಯವಿದೆಯೇ ಎಂದು ಪ್ರಶ್ನಿಸಿದರು.

ನಮಾಜ್ ಮಾಡಲು ಅನುಮತಿ ಕೇಳಿಕೊಂಡು ಮುಸ್ಲಿಮರು ಬರುತ್ತಾರೆಯೇ. ಅನುಮತಿ ಪಡೆಯದೇ ರಸ್ತೆಯಲ್ಲಿ ನಮಾಜ್ ಮಾಡಿದರೆ ಅದನ್ನು ತಡೆಯುವ ಶಕ್ತಿ ಇದೆಯೇ. ಜಾರಿ ಮಾಡಲು ಸಾಧ್ಯವಾಗುವ ಕಾನೂನನ್ನು ಜಾರಿಗೆ ತರಬೇಕೇ ಹೊರತು, ಜಾರಿ ಮಾಡಲಾಗದ ಕಾನೂನುಗಳನ್ನು ಜಾರಿಗೆ ತಂದರೆ, ಅದು ಪುಸ್ತಕದಲ್ಲಿ ಮಾತ್ರವೇ ಇರುತ್ತದೆ. ಈ ನಿಯಮ ಯಾವ ಪ್ರಮಾಣದಲ್ಲಿ ಜಾರಿಗೆ ಬರುತ್ತದೆ ಕಾದು ನೋಡೋಣ ಎಂದರು.

ಅದಕ್ಕೂ ಮುನ್ನಾ ಜಾಗೃತ ಕರ್ನಾಟಕ ಆಯೋಜಿಸಿದ್ದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ- ಈಡೇರುವುದೇ ಸರ್ವ ಸಮುದಾಯಗಳ ನಿರೀಕ್ಷೆ. ವಿಚಾರಗೋಷ್ಠಿಯಲ್ಲಿ ಮಾತನಾಡಿದ ಕೆ.ಎನ್.ರಾಜಣ್ಣ, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರಿಗೆ ಮೀಸಲು ಕ್ಷೇತ್ರವೇ ಯಾಕೆ ಬೇಕು? ಅವರು ಸಾಮಾನ್ಯ ಕ್ಷೇತ್ರದಲ್ಲಿ ಯಾಕೆ ನಿಲ್ಲಬಾರದು? ಅವರು ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದರೆ ಮೀಸಲು ಕ್ಷೇತ್ರದಿಂದ ಮತ್ತೊಬ್ಬರಿಗೆ ಅವಕಾಶ ದೊರೆಯುತ್ತದೆ ಅಲ್ಲವೇ ಎಂದು ಹೇಳಿದರು.

ಮೀಸಲು ಕ್ಷೇತ್ರ ಬಿಟ್ಟುಕೊಡುವ ಮನ:ಸ್ಥಿತಿ ನಮ್ಮಲ್ಲಿ ಬರಬೇಕು. ಎಲ್ಲವನ್ನು ನಾವೇ ಬಳಸಿಕೊಂಡು ಕೂತರೆ ಬೇರೆಯವರು ಎಲ್ಲಿಗೆ ಹೋಗುತ್ತಾರೆ. ನಮ್ಮಲ್ಲಿ ಧೈರ್ಯದ ಕೊರತೆಯಿದ್ದು, ಅದು ಹೋಗಬೇಕೆಂದು ಪರಮೇಶ್ವರ್ ಅವರಿಗೆ ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೆಚ್. ಕಾಂತರಾಜು, ಜಯಪ್ರಕಾಶ್ ಹೆಗ್ಡೆ ನೇತೃತ್ವದ ವರದಿ ಜಾರಿ ಮಾಡುವ ಮನಸ್ಥಿತಿ ಹೊಂದಿದ್ದರು. ಆದರೆ, ವರದಿ ಜಾರಿಗೊಳಿಸದಂತೆ ಕಾಂಗ್ರೆಸ್ ನಾಯಕರೇ ಅವರ ಮೇಲೆ ಒತ್ತಡ ತಂದರು. ಹೀಗಾಗಿ ಮತ್ತೊಂದು ಸರ್ವೆ ನಡೆಸುವ ನಿರ್ಣಯ ಕೈಗೊಳ್ಳಬೇಕಾಯಿತು. ಈ ವಿಚಾರದಲ್ಲಿ ಅವರು ನಿಸ್ಸಹಾಯಕರಾದರು ಎಂದು ಹೇಳಿದರು.

ಯತೀಂದ್ರ ಸಿದ್ದರಾಮಯ್ಯ ಮುಂದೊಂದು ದಿನ ಮುಖ್ಯಮಂತ್ರಿ ಯಾಕಾಗಬಾರದು. ದೇವೇಗೌಡರಿಗೆ ಕುಮಾರಸ್ವಾಮಿ ಉತ್ತರಾಧಿಕಾರಿ ಆಗಬಹುದು, ಸಿದ್ದರಾಮಯ್ಯಗೆ ಯತೀಂದ್ರ ಉತ್ತರಾಧಿಕಾರಿ ಆದರೆ ತೊಂದರೆ ಏನು. ದೇವೇಗೌಡರು ಪ್ರಧಾನಮಂತ್ರಿ, ಮುಖ್ಯಮಂತ್ರಿ ಆಗುವುದಕ್ಕೆ ಅವರ ಹೋರಾಟ ಇದೆ. ಕುಮಾರಸ್ವಾಮಿ ಅವರಿಗೆ ಏನಿದೆ? ಅವರಪ್ಪನ ಹೆಸರಷ್ಟೇ ಬಂಡವಾಳ ಎಂದು ಟೀಕಿಸಿದರು.

## ದಿಢೀರ್ ಮಳೆ: ಹಾಸನಾಂಬ ಭಕ್ತರ ಪರದಾಟ

**ಹಾಸನ:** ನಗರದಲ್ಲಿ ಶನಿವಾರ ಸಂಜೆ ಸುರಿದ ದಿಢೀರ್ ಮಳೆಯಿಂದ ಹಾಸನಾಂಬ ದರ್ಶನಕ್ಕೆ ಸರದಿ ಸಾಲಿನಲ್ಲಿ ನಿಂತಿದ್ದ ಭಕ್ತರು ಪರದಾಡುವಂತಾಯಿತು.

ಧರ್ಮದರ್ಶನ ಹಾಗು 300 ರೂ. ಸಾಲಿನಲ್ಲಿ ಸಾವಿರಾರು ಭಕ್ತರು ನಿಂತಿದ್ದರು. ದಿಢೀರನೇ ಸುರಿದ ಜೋರು ಮಳೆಯಿಂದಾಗಿ ಜನರು ನೆನೆದರು. ಹತ್ತು ನಿಮಿಷಗಳ ಕಾಲ ಗುಡುಗು ಸಿಡಿಲು ಸಹಿತ ಸುರಿದ ಮಳೆ ಭೀತಿ ಯುಂಟು ಮಾಡಿತು. ನಂತರ ವರುಣನ ಅಬ್ಬರ ಕಡಿಮೆ ಯಾಗಿ ಪರಿಸ್ಥಿತಿ ತಿಳಿ ಯಾಯಿತು. ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಹಮ್ಮಿಕೊಂಡಿರುವ ವಸ್ತು ಪ್ರದರ್ಶನಕ್ಕೂ ಮಳೆ ಅಡಚಣೆ ಯುಂಟು ಮಾಡಿತು.


ಹಾಸನಾಂಬ ದೇವಾಲಯದಲ್ಲೇ ಮೊಕ್ಕಾಂ ಹೂಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು, ತೇರಾಪಂಥ್ ಭವನಕ್ಕೆ ಭೇಟಿ ನೀಡಿ ಸ್ಕೌಟ್ಸ್ ಅಂಡ್ ಗೈಡ್ಸ್ ಶಿಬಿರಾರ್ಥಿಗಳಿಗೆ ಮಾಡಿರುವ ಊಟದ ವ್ಯವಸ್ಥೆ ಪರಿಶೀಲಿಸಿ ಅಲ್ಲಿಯೇ ಆಹಾರ ಸೇವಿಸಿದರು.

C M Y K C M Y K C M Y K C M Y K

# ಗೂಗಲ್ ಮ್ಯಾಪ್‌ಗೆ ಪರ್ಯಾಯ ಕಟ್ಟಿದ ರಾಕೇಶ್ ವರ್ಮಾ!



"ದೇಶಕ್ಕಾಗಿ ನೀವು ಏನಾದರೂ ಮಾಡಬೇಕು ಎಂಬ ಭಾವನೆ ಬಲವಾದಾಗ, ಬೇರೆ ಯಾವುದೂ ಮಹತ್ವ ಎನ್ನಿಸುವುದಿಲ್ಲ. ಆದ್ದರಿಂದ ಅಮೆರಿಕವನ್ನು ಬಿಟ್ಟು ಬಂದೆವು ಎನ್ನುತ್ತಾರೆ ವರ್ಮಾ. ಭಾರತದ 7500ಕ್ಕೂ ಹೆಚ್ಚು ನಗರ ಮತ್ತು ಪಟ್ಟಣಗಳಲ್ಲಿ ಹಾಗೂ 7.5 ಲಕ್ಷ ಹಳ್ಳಿಗಳಲ್ಲಿ ಅವರ ಮ್ಯಾಪ್ ಇಂಡಿಯಾ ಕಾರ್ಯನಿರ್ವಹಿಸುತ್ತಿದೆ! ಆಟೋಮೇಟಿವ್, ಲಾಜಿಸ್ಟಿಕ್, ಇ-ಕಾಮರ್ಸ್ ಮತ್ತು ಸ್ಮಾರ್ಟ್ ಸಿಟಿಗಳ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.



ನಿಮಗೆ ಅಚ್ಚರಿಯಾದೀತು. 1995ರಲ್ಲಿ ಇಂಟರ್ನೆಟ್, ಜಿಪಿಎಸ್ (ಗ್ಲೋಬಲ್ ಪೊಸಿಶನಿಂಗ್ ಸಿಸ್ಟಮ್), ಗೂಗಲ್ ಮ್ಯಾಪ್, ಸ್ಮಾರ್ಟ್ ಫೋನ್‌ಗಳು ಜಗತ್ತಿನಲ್ಲಿ ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲೇ, ಭಾರತದಲ್ಲಿ ಡಿಜಿಟಲ್ ಮ್ಯಾಪಿಂಗ್, ನೇವಿಗೇಶನ್ ಕೆಲಸಗಳು ನಡೆದಿದ್ದವು! ಅದೊಂದು ತಂತ್ರಜ್ಞಾನಿ ಕುಟುಂಬವು ಡಿಜಿಟಲ್ ಮ್ಯಾಪಿಂಗ್ ಸಲುವಾಗಿ ಹಗಲಿರುಳೆನ್ನದೆ ಅಪಾರ ನಂಬಿಕೆಯಿಂದ ಸಂಶೋಧನೆ ನಡೆಸುತ್ತಿತ್ತು!

ರಾಕೇಶ್ ವರ್ಮಾ ಅವರು ಆಗ ಡಿಜಿಟಲ್ ಮ್ಯಾಪ್‌ಗಳ ಬಗ್ಗೆ ವಿವರಿಸಿದರೆ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಆದರೆ ಇವರು ಯಾವುದೇ ಉಪಗ್ರಹಗಳ ನೆರವು ಇಲ್ಲದೆಯೇ ಬೀದಿಬೀದಿಗಳ ಡಿಜಿಟಲ್ ಮ್ಯಾಪ್ ತಯಾರಿಸಿದ್ದರು. ಗ್ರಾಹಕರು, ಬಿಸಿನೆಸ್, ಸರಕಾರಗಳಿಗೆ ಲೊಕೇಶನ್ ಬಹಳ ಮುಖ್ಯ, ಇದು ಭವಿಷ್ಯದಲ್ಲಿ ದೊಡ್ಡ ಪಾತ್ರ ವಹಿಸಲಿದೆ ಎಂಬುದು ತೊಂಬತ್ತರ ದಶಕದ ವರ್ಮಾ ದಂಪತಿಗೆ ಮನದಟ್ಟಾಗಿತ್ತು!

ಕೋಕಾಕೋಲ ಕಂಪನಿಯೇ ವರ್ಮಾ ಅವರ ಮೊದಲ ಗ್ರಾಹಕನಾಗಿತ್ತು. ಆ ಕಂಪನಿಗೆ ಲಾಜಿಸ್ಟಿಕ್ಸ್ ಸಲುವಾಗಿ ಮ್ಯಾಪಿಂಗ್ ಅಗತ್ಯವಿತ್ತು. ಬಳಿಕ ಭಾರತೀಯ ನೌಕಾಪಡೆಗೂ ನೇವಿಗೇಶನ್ ನೆರವು ನೀಡಿದರು. ಸಮುದ್ರದಲ್ಲಿ ಸಂಚಾರ ಸಂದರ್ಭ ನೌಕೆಗಳಿಗೆ ಮಾರ್ಗಗಳನ್ನು ಕಂಡುಕೊಳ್ಳಲು ನೇವಿಗೇಶನ್ ನೆರವು ಬೇಕಿತ್ತು.

ದೇಶಕ್ಕಾಗಿ ನೀವು ಏನಾದರೂ ಮಾಡಬೇಕು ಎಂಬ ಭಾವನೆ ಬಲವಾದಾಗ, ಬೇರೆ ಯಾವುದೂ ಮಹತ್ವ ಎನ್ನಿಸುವುದಿಲ್ಲ. ಆದ್ದರಿಂದ ಅಮೆರಿಕವನ್ನು ಬಿಟ್ಟು ಬಂದೆವು ಎನ್ನುತ್ತಾರೆ ವರ್ಮಾ. ಭಾರತದ 7500ಕ್ಕೂ ಹೆಚ್ಚು ನಗರ ಮತ್ತು ಪಟ್ಟಣಗಳಲ್ಲಿ ಹಾಗೂ 7.5 ಲಕ್ಷ ಹಳ್ಳಿಗಳಲ್ಲಿ ಅವರ ಮ್ಯಾಪ್ ಇಂಡಿಯಾ ಕಾರ್ಯನಿರ್ವಹಿಸುತ್ತಿದೆ! ಆಟೋಮೇಟಿವ್, ಲಾಜಿಸ್ಟಿಕ್ಸ್, ಇ-ಕಾಮರ್ಸ್ ಮತ್ತು ಸ್ಮಾರ್ಟ್ ಸಿಟಿಗಳ ನಿರ್ಮಾಣದಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ.

ನೀವು ಎದರೂ ಹೋಗಬೇಕಿದ್ದರೆ, ದಾರಿ ಯಾವುದಯ್ಯಾ ಎಂದು ಯಾರನ್ನೂ ಕೇಳುವ ಅಗತ್ಯ ಬಹಳ ಕಡಿಮೆ. ಏಕೆಂದರೆ ಗೂಗಲ್ ಮ್ಯಾಪ್ ಬಳಸುತ್ತಿರಬಹುದು. ಹೀಗಿದ್ದರೂ, ಗೂಗಲ್ ಮ್ಯಾಪ್ ಭಾರತದ ಕಂಪನಿಯದ್ದಲ್ಲ. ಅಮೆರಿಕದ ತಂತ್ರಜ್ಞಾನ ದಿಗ್ಗಜ ಗೂಗಲ್‌ನ ಅಧೀನದಲ್ಲಿರುವಂಥದ್ದು. ಅಲ್ಲಿನ ತಿಕ್ಕಲನಂತಿರುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನಾಳೆ ಏನಾದರೂ, ಗೂಗಲ್ ಮ್ಯಾಪ್ ಅನ್ನು ಭಾರತದಲ್ಲಿ ಬ್ಯಾನ್ ಮಾಡಿದರೆ? ರಾತ್ರೋರಾತ್ರಿ ಅದರ ಸೇವೆ ಬಂದ್ ಆಗಬಹುದು.

ಆದರೆ ಅದಕ್ಕೀಗ ಚಿಂತೆ ಮಾಡುವುದೇ ಬೇಡ! ಏಕೆಂದರೆ ಗೂಗಲ್ ಮ್ಯಾಪ್‌ಗೇ ಸಡ್ಡು ಹೊಡೆಯುವಂತೆ ಭಾರತದ್ದೇ ಆದ ಮ್ಯಾಪಲ್ಸ್ ಅನ್ನು ತಂತ್ರಜ್ಞಾನ ಕಂಪನಿಯಾದ ಮ್ಯಾಪ್ ಮೈ ಇಂಡಿಯಾ ತಯಾರಿಸಿದೆ. ದಿನೇ ದಿನೆ ಇದು ಜನಪ್ರಿಯವಾಗುತ್ತಿದೆ! ಈ ಸಂಸ್ಥೆಯ ಸ್ಥಾಪಕರು ರಾಕೇಶ್ ವರ್ಮಾ!

ದೇಶ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುವ ಇಂಥ ಉದ್ಯಮಿಗಳನ್ನು ಹೇಗೆ ಪ್ರೋತ್ಸಾಹಿಸಬೇಕು ಎಂಬುದನ್ನು ಇತರ ರಾಜಕಾರಣಿಗಳು ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್, ಆಂಧ್ರ ಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ಅವರನ್ನು ನೋಡಿ ಕಲಿಯಬೇಕು. ಇತ್ತೀಚೆಗೆ ಮ್ಯಾಪ್ ಮೈ ಇಂಡಿಯಾದ ತಂಡವು ಕೇಂದ್ರ ಸಚಿವರನ್ನು ಭೇಟಿ ಮಾಡಿತು. ಅವರಿಂದ ಎಲ್ಲ ವಿವರಗಳನ್ನು ಪಡೆದ ಸಚಿವರು ಕುತೂಹಲದಿಂದ ಮ್ಯಾಪಲ್ಸ್ ಅನ್ನು ತಮ್ಮ ಕಾರಿನಲ್ಲಿ ಅಳವಡಿಸಿ ನೋಡಿದರು. ಗೂಗಲ್ ಮ್ಯಾಪ್‌ಗಿಂತಲೂ ವಿಶೇಷ ಮತ್ತು ಅನುಕೂಲಕರ ಫೀಚರ್‌ಗಳನ್ನು ಒಳಗೊಂಡಿರುವ ಮ್ಯಾಪಲ್ಸ್ ಸಚಿವರ ಮನಗೆದ್ದಿತು.

ಅವರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಬದಲಿಗೆ ಸಣ್ಣ ವಿಡಿಯೊ ಮೂಲಕ ಸ್ಪಷ್ಟವಾಗಿ ಚಿತ್ರೀಕರಿಸಿ, ಸ್ವತಃ ಮ್ಯಾಪಲ್ಸ್‌ನ ಅನುಕೂಲಗಳನ್ನು ವಿವರಿಸಿ ತಮ್ಮ ಎಕ್ಸ್ ಜಾಲತಾಣ ಖಾತೆಯಲ್ಲಿ ಪಿನ್ ಮಾಡಿದರು. "Swdeshi Mappls by MapIndia, Good features.. must try!" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ರೈಲ್ವೆ ಇಲಾಖೆಯೂ ಇದನ್ನು ಬಳಸಿಕೊಳ್ಳಲಿದೆ ಎಂದು ತಿಳಿಸಿದರು. ಕೇಂದ್ರ ಐಟಿ ಸಚಿವರು ಈ ಪೋ ಹಾಕಿದ ಬಳಿಕ ಲಕ್ಷಾಂತರ ಮಂದಿ ಮ್ಯಾಪಲ್ಸ್ ಅಪ್ಲಿಕೇಷನ್ ಅನ್ನು ಡೌನ್ ಲೋಡ್ ಮಾಡಿಕೊಂಡಿದ್ದಾರೆ!

ನಿಜಕ್ಕೂ ರಾಕೇಶ್ ವರ್ಮಾ ಅವರ ಬದುಕು ಮತ್ತು ಸಾಧನೆ ಕೋಟ್ಯಂತರ ಭಾರತೀಯರಿಗೆ ಸ್ಫೂರ್ತಿದಾಯಕ. ಅವರೊಬ್ಬ - ಜನರೇಶನ್ ಉದ್ಯಮಿ, ಏಂಜೆಲ್ ಇನ್ವೆಸ್ಟರ್. ಅವರು ಮನಸ್ಸು ಮಾಡಿದ್ದರೆ ಅಮೆರಿಕದ ನೆಲೆ ನಿಂತು ಐಷಾರಾಮಿ ಬದುಕನ್ನು ನಡೆಸಬಹುದಿತ್ತು. 1990ರಲ್ಲಿಯೇ ಅಮೆರಿಕದಲ್ಲಿ ಜನರಲ್ ಮೋಟಾರ್ ಕಂಪನಿಯಲ್ಲಿ 12 ವರ್ಷಗಳ ಅದ್ಭುತ ಕರಿಯರ್ ಅನ್ನು ನಡೆಸಿದ್ದರು. ಆದರೆ ಕೈ ತುಂಬಾ ಸಂಬಳ ಸವಲತ್ತುಗಳನ್ನು ಕೊಟ್ಟಿದ್ದ ಹುದ್ದೆಗೆ ರಾಜೀನಾಮೆ ಕೊಟ್ಟರು.

ತಾಯ್ನಾಡಿನ ಉದ್ಯಮಿಯಾಗಿ ಸಮಾಜಸೇವೆ ಮಾಡಬೇಕು, ತಾನೂ ಬೆಳೆಯಬೇಕು, ದೇಶದ ಅಭಿವೃದ್ಧಿಗೂ ಕಾಣಿಕೆ ಸಲ್ಲಿಸಬೇಕು ಎಂಬುದು ಅವರ ಮಹತ್ವಾಕಾಂಕ್ಷೆಯಾಗಿತ್ತು. ತಮ್ಮ ಮಕ್ಕಳನ್ನೂ ಭಾರತೀಯ ಸಂಸ್ಕೃತಿಯ ವಾತಾವರಣದಲ್ಲಿ ಬೆಳೆಸಬೇಕು ಎಂಬ ಬಯಕೆಯೂ ಇತ್ತು. ಹೀಗಾಗಿ ಅಮೆರಿಕದಿಂದ ಭಾರತಕ್ಕೆ ಹಿಂತಿರುಗಿದರು!

ಅನೇಕ ಭಾರತೀಯರು ಅಮೆರಿಕದ ಡಾಲರ್ ಕನಸು ಕಾಣುತ್ತಾ ಅಲ್ಲಿಯೇ ಕಾಯಂ ಆಗಿ ನೆಲೆ ನಿಲ್ಲಲು ಹಾತೊರೆದರೆ, ರಾಕೇಶ್ ವರ್ಮಾ ತದ್ವಿರುದ್ಧವಾಗಿ, ಮಹೋನ್ನತ ಆಶಯವನ್ನು ಹೊತ್ತು ಮರಳಿದರು. ಅಷ್ಟೇ ಅಲ್ಲ, ಹಿಡಿದ ಕೆಲಸವನ್ನು ಸಾಧಿಸಿದರು. ಅದರ ಫಲಶ್ರುತಿ ಈಗ ನಮ್ಮ ಮುಂದಿದೆ. ನನ್ನ ದೇಶದ ಆಚಾರ-ವಿಚಾರಗಳು, ಜನರ ಪ್ರೀತಿ-ವಿಶ್ವಾಸಗಳು ದೂರದ ಅಮೆರಿಕದಲ್ಲಿ ನಿತ್ಯ ನೆನಪಾಗುತ್ತಿತ್ತು.

ದೇಶಪ್ರೇಮವೇ ನನ್ನನ್ನು ಭಾರತಕ್ಕೆ ಮರಳಿಸಿತು ಎನ್ನುತ್ತಾರೆ ವರ್ಮಾ. ಹಾಗೆ ವಾಪಸಾದವರು ಸಿಇ ಇನೋಸಿಸ್ಟಮ್ಸ್ ಎಂಬ ಸ್ಟಾರ್ಟಪ್ ಅನ್ನು ಸ್ಥಾಪಿಸಿದರು. ಅದುವೇ ಮುಂದೆ ಮ್ಯಾಪ್ ಮೈ ಇಂಡಿಯಾ ಆಗಿ ಹೊರಹೊಮ್ಮಿತು. ಇಂದು ಗೂಗಲ್ ಮ್ಯಾಪ್‌ಗೆ ಯಶಸ್ವಿ ಪರ್ಯಾಯ ಅಪ್ಲಿಕೇಶನ್ ಕಟ್ಟಿ ಮನೆಮಾತಾಗಿದೆ.

ರಾಜಸ್ಥಾನದ ಪ್ರಸಿದ್ಧ ಖಾಸಗಿ ಯುನಿವರ್ಸಿಟಿ ಬಿಟ್ಸ್ ಪಿಲಾನಿಯಲ್ಲಿ 1972ರಲ್ಲಿ ಎಂಜಿನಿಯರಿಂಗ್ ಓದಿದ ಬಳಿಕ, ಅಮೆರಿಕದ ಈಸ್ಟರ್ನ್ ವಾಷಿಂಗ್ಟನ್ ಯುನಿವರ್ಸಿಟಿಯಲ್ಲಿ ಎಂಬಿಎ ಗಳಿಸಿದರು ವರ್ಮಾ. ಅಮೆರಿಕದಲ್ಲಿ ಕೆಲಸದಲ್ಲಿದ್ದಾಗಲೇ ತಮ್ಮದೇ ಸ್ಟಾರ್ಟಪ್ ಮಾಡುವ ಕನಸು ಅವರಲ್ಲಿತ್ತು. ಪತ್ನಿ ರಶ್ಮಿ ವರ್ಮಾ ಕೂಡ ಐಐಟಿ ರೂರ್ಕಿಯಲ್ಲಿ ಎಂಜಿನಿಯರಿಂಗ್ ಹಾಗೂ ಈಸ್ಟರ್ನ್ ವಾಷಿಂಗ್ಟನ್ ಯುನಿವರ್ಸಿಟಿಯಲ್ಲಿ ಎಂಎಸ್ ಪದವಿ ಗಳಿಸಿದ ಪ್ರತಿಭಾವಂತೆ.

ಕಳೆದ 50 ವರ್ಷಗಳಿಂದ ಬಿಟ್ಸ್ ಪಿಲಾನಿಯ ಹಳೆ ವಿದ್ಯಾರ್ಥಿಗಳಲ್ಲಿ ಟಾಪ್ 50 ಸಾಧಕರ ಪಟ್ಟಿಯಲ್ಲಿ ರಾಕೇಶ್ ವರ್ಮಾ ಸ್ಥಾನ ಗಳಿಸಿದ್ದರೆ. ನಿರಂತರ ಕಲಿಕೆ ಮತ್ತು ಅಭಿವೃದ್ಧಿ ಸಾಧಿಸುವುದು ಅವರ ಯಶಸ್ಸಿನ ಮಂತ್ರವಾಗಿದೆ. ಅದೇ ಸಂಸ್ಕೃತಿಯನ್ನು ಮ್ಯಾಪ್ ಮೈ ಇಂಡಿಯಾದ ಎಲ್ಲ ಉದ್ಯೋಗಿಗಳಿಗೂ ಕಲಿಸುತ್ತಾರೆ.

ಮಷಿನ್ ಲರ್ನಿಂಗ್ ಮತ್ತು ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಕೌಶಲವನ್ನು ಕಂಪನಿಯ ಬಹುತೇಕ ಉದ್ಯೋಗಿಗಳಿಗೆ ವರ್ಗಾಯಿಸಿದ್ದಾರೆ. ಇನ್ನೂ ಅನೇಕ ಮಂದಿಗೆ, ಏನಿದು ಮ್ಯಾಪ್ ಮೈ ಇಂಡಿಯಾ? ಇದು ಹೇಗೆ ಕೆಲಸ ಮಾಡುತ್ತದೆ ಎಂಬ ಪ್ರಶ್ನೆ ಇರಬಹುದು. ಈ ಸಂಸ್ಥೆ ಡಿಜಿಟಲ್ ಮ್ಯಾಪ್‌ಗಳನ್ನು, ನೇವಿಗೇಶನ್ ಸೇವೆಗಳನ್ನು ನೀಡುತ್ತದೆ. ಸರಳವಾಗಿ ಹೇಳುವುದಿದ್ದರೆ ಗೂಗಲ್ ಮ್ಯಾಪ್‌ಗೆ ಪರ್ಯಾಯ ಎನ್ನಬಹುದು.

ಭಾರತದ ನೇವಿಗೇಶನ್ ವಲಯದಲ್ಲಿ ಮುಂಚೂಣಿಯಲ್ಲಿದೆ. ದೇಶದ ಮೊದಲ ಡಿಜಿಟಲ್ ಮ್ಯಾಪಿಂಗ್ ಪೋರ್ಟಲ್ ಅನ್ನು ಆರಂಭಿಸಿದೆ. ಲಾಸ್ಟ್ ಮೈಲ್ ಚಾಲೆಂಜ್‌ಗಳನ್ನು ಬಗೆಹರಿಸಿದೆ. ರಾಷ್ಟ್ರ ವ್ಯಾಪಿ ಡಿಜಿಟಲ್ ಅಡ್ರೆಸ್ ಸಿಸ್ಟಮ್ ಅನ್ನು ವ್ಯವಸ್ಥೆಗೊಳಿಸಿದೆ. ರಿಯಲ್ ಟೈಮ್ ಟ್ರ್ಯಾಕಿಂಗ್, ಶಾಪ್ ಲೆವೆಲ್ ಮ್ಯಾಪಿಂಗ್ ಫೀಚರ್‌ಗಳ ಸೇವೆ ಒದಗಿಸುತ್ತಿದೆ. ಸ್ಮಾರ್ಟ್ ಕಾರುಗಳಲ್ಲಿ ಡಿಜಿಟಲ್ ಮ್ಯಾಪ್ ಮತ್ತು ತ್ರಿ-ಡಿ ನೇವಿಗೇಶನ್ ಸಹಿತ ಲೊಕೇಶನ್ ಟೆಕ್ನಾಲಜಿ ಬಳಕೆಗೆ ಉತ್ತೇಜಿಸಿದೆ.

ತ್ರಿಡಿ ಜಂಕ್ಷನ್ ವ್ಯೂಸ್, ಡೋರ್‌ಸ್ಟೆಪ್ ನೇವಿಗೇಶನ್, ವೇಗದ ಮಿತಿ, ಅಪಘಾತ ಪ್ರದೇಶ, ಸ್ಪೀಡ್ ಬ್ರೇಕರ್‌ಗೆ ರಿಯಲ್-ಟೈಮ್ ಡ್ರೈವಿಂಗ್ ಅಲರ್ಟ್ಸ್ ನೀಡುತ್ತದೆ. ಇದರಲ್ಲಿರುವ ಟ್ರಿಪ್ ಕಾಸ್ಟ್ ಕ್ಯಾಲ್ಕ್ಯುಲೇಟರ್ ಬಳಸಿ ಅಂದಾಜು ಟೋಲ್ ಶುಲ್ಕ ಎಷ್ಟಾಗುತ್ತದೆ ಎಂಬುದನ್ನು ತಿಳಿಯಬಹುದು.

ತ್ರಿ-ಡಿ ಜಂಕ್ಷನ್ ವ್ಯೂಸ್ ಫೀಚರ್ ಎಷ್ಟು ಚೆನ್ನಾಗಿದೆ ಎಂದರೆ, ಫ್ಲೈ ಓವರ್, ಅಂಡರ್ ಪಾಸ್‌ಗಳ ಎಂಟ್ರಿ ಮತ್ತು ಎಕ್ಸಿಟ್ ಪಾಯಿಂಟ್‌ಗಳನ್ನು ಅತ್ಯಂತ ಸ್ಪಷ್ಟವಾಗಿ, ರಿಯಲಿಸ್ಟಿಕ್ ಆಗಿ ತೋರಿಸುತ್ತದೆ. ಇದರಿಂದಾಗಿ ಕೊನೆಯ ಕ್ಷಣದಲ್ಲಿ ಲೇನ್ ಬದಲಾವಣೆಯಿಂದಾಗಿ ಎಕ್ಸಿಟ್ ಅಥವಾ ಎಂಟ್ರಿ ಪಾಯಿಂಟ್ ತಪ್ಪುವ ಸಾಧ್ಯತೆ ಇರುವುದಿಲ್ಲ.

ಹಿಂದಿ, ಕನ್ನಡ, ಮರಾಠಿ, ಪಂಜಾಬಿ, ಗುಜರಾತಿ ಸೇರಿದಂತೆ 9 ಭಾಷೆಗಳಲ್ಲಿ ಸೇವೆಗಳನ್ನು ನೀಡುತ್ತದೆ. ಮ್ಯಾಪಲ್ಸ್ ಡಾಟ್ ಕಾಮ್, ಗೂಗಲ್ ಪ್ಲೇ ಸ್ಟೋರ್ ಅಥವಾ ಆಪಲ್ ಆಪ್ ಸ್ಟೋರ್ ಮೂಲಕ ಉಚಿತವಾಗಿ ಡೌನ್‌ಲೋಡ್ ಮಾಡಬಹುದು.


ಮತ್ತೊಬ್ಬ ಪ್ರೇರಣಾದಾಯಿ ಟೆಕ್ ಉದ್ಯಮಿ, ಜೊಹೊ ಕಂಪನಿಯ ಸ್ಥಾಪಕ, ವಾಟ್ಸ್ಯಾಪ್‌ಗೆ ಪರ್ಯಾಯವಾದ ಅರಟ್ಟೈ ಆಪ್‌ನ ಜನಕ ಶ್ರೀಧರ್ ವೆಂಬು ಅವರು ಮ್ಯಾಪ್ ಮೈ ಇಂಡಿಯಾದ ಬಗ್ಗೆ ಹೀಗೆನ್ನುತ್ತಾರೆ- ವಾಸ್ತವವಾಗಿ ಗೂಗಲ್ ಮ್ಯಾಪ್‌ಗಿಂತಲೂ ಹೆಚ್ಚು ಕಾಲದಿಂದ, ದಶಕಗಟ್ಟಲೆ ಸಂಶೋಧನೆ ಮತ್ತು ಅಭಿವೃದ್ಧಿಯ ಬಳಿಕ ಮ್ಯಾಪ್ ಮೈ ಇಂಡಿಯಾದ ನೇವಿಗೇಶನ್ ಆಪ್ ಮ್ಯಾಪಲ್ಸ್ ಸಿದ್ಧವಾಗಿದೆ.

ಬಹಳ ಚೆನ್ನಾಗಿಯೂ ಇದೆ. ಭಾರತದಲ್ಲಿ ಇಂಥ ಸ್ವದೇಶಿ ಉದ್ಯಮಿಗಳ ಸಂಖ್ಯೆ ಹೆಚ್ಚಬೇಕು. ಮ್ಯಾಪಲ್ಸ್ ನೇವಿಗೇಶನ್ ಮತ್ತು ಮ್ಯಾಪಿಂಗ್ ಅಪ್ಲಿಕೇಶನ್ ಅನ್ನು ಮ್ಯಾಪ್ ಮೈ ಇಂಡಿಯಾ ಸಂಸ್ಥೆಯು ಇಸ್ರೋ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿದೆ. ಇದು ಗೂಗಲ್ ಮ್ಯಾಪ್‌ಗೆ ಹೋಲಿಸಿದರೆ, ಹೈಪರ್ ಲೋಕಲ್ ಪರ್ಯಾಯವಾಗಿದೆ. ಭಾರತದಲ್ಲಿ ಉದ್ಯಮಶೀಲರ ಸಂಖ್ಯೆ ಹೆಚ್ಚಬೇಕು.

ಆಗ ಮಾತ್ರ ಭಾರತ ನಿಜವಾಗಿಯೂ ಸ್ವಾವಲಂಬಿಯಾಗಲಿದೆ. ಖಾಸಗಿ ವಲಯದ ಉದ್ಯಮಿಗಳ ಬೆಳವಣಿಗೆಗೆ ಪ್ರಧಾನಿ ನರೇಂದ್ರ ಮೋದಿಯವರ ನಾಯಕತ್ವ ಪುಷ್ಟಿ ನೀಡಿದೆ. ಹೀಗಾಗಿ ಭಾರತ ಮತ್ತಷ್ಟು ಪ್ರಬಲವಾಗಲಿದೆ ಎನ್ನುತ್ತಾರೆ ರಾಕೇಶ್ ವರ್ಮಾ. ಇಲ್ಲಿ ನಿಜಕ್ಕೂ ಕಾಡುವ ಪ್ರಶ್ನೆ ಏನೆಂದರೆ, ಗೂಗಲ್ ಮ್ಯಾಪ್ ಕಣ್ಣು ಬಿಡುವುದಕ್ಕೆ ಮೊದಲೇ, ಅಮೆರಿಕದಿಂದ ಭಾರತಕ್ಕೆ ಮರಳಿ, ಡಿಜಿಟಲ್ ಮ್ಯಾಪಿಂಗ್ ಕ್ಷೇತ್ರದಲ್ಲಿ ಹಗಲಿರುಳೆನ್ನದೆ ಶ್ರಮಿಸಿದ್ದ ರಾಕೇಶ್ ವರ್ಮಾ ದಂಪತಿಗೆ ಏಕೆ ನಿರೀಕ್ಷಿತ ಬೆಂಬಲ ಲಭಿಸುವಲ್ಲಿ ಇಷ್ಟೊಂದು ವಿಳಂಬವಾಯಿತು? ಖಾಸಗಿ ವಲಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿಗೆ ಮತ್ತು ಟೆಕ್ ಉದ್ಯಮಿಗಳಿಗೆ ಪ್ರೋತ್ಸಾಹ ಸಿಗದಿರುವುದು ಕೂಡ, ಗೂಗಲ್, ಅಮೆಜಾನ್, ಫೇಸ್‌ಬುಕ್ನಂಥ ದಿಗ್ಗಜ ತಂತ್ರನ ಕಂಪನಿಗಳು ಭಾರತದಲ್ಲಿ ಅಸ್ತಿತ್ವಕ್ಕೆ ಬರದಿರುವುದಕ್ಕೆ ಕಾರಣವಿರಬಹುದೇ? ಯೋಚಿಸಲು ಇದು ಸಕಾಲವಾಗಿದೆ.

ಜಾಗತೀಕರಣದ ಪರಿಣಾಗ ಇಡೀ ವಿಶ್ವವೇ ಒಂದು ಹಳ್ಳಿಯಾಗಿರುವಾಗ, ನಮ್ಮ ದೇಶದಲ್ಲೂ ಗೂಗಲ್, ಅಮೆಜಾನ್, ಫೇಸ್‌ಬುಕ್‌ಗೆ ಪರ್ಯಾಯವಾಗಿ ಪ್ರಬಲ ಟೆಕ್ ಕಂಪನಿಗಳು ಹೊರ ಹೊಮ್ಮುವ ಉಜ್ವಲ ಅವಕಾಶಗಳು ಇದ್ದೇ ಇವೆ. ಆದರೆ ಅವುಗಳಿಗೆ ಸಮಗ್ರ ಬೆಂಬಲವೂ ಅಗತ್ಯ.

**- ಕೇಶವ** ಪ್ರಸಾದ್ ಬಿ



## 19-10-2025 ದಿನ ಭವಿಷ್ಯ

**ಮೇಷ:** ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಕೆಲಸದ ಒತ್ತಡ ನಿಮ್ಮ ಮನಸ್ಸನ್ನು ಆಕ್ರಮಿಸಿದ್ದರೂ ಸಹ ನಿಮ್ಮ ಪ್ರೀತಿಪಾತ್ರರು ನಿಮಗೆ ಪ್ರಣಯದ ಅಪಾರ ಸಂತೋಷವನ್ನು ತರುತ್ತಾರೆ ಜನರೊಂದಿಗೆ ಮಾತನಾಡುವಲ್ಲಿ ಇಂದು ನೀವು ನಿಮ್ಮ ಅಮೂಲ್ಯವಾದ ಸಮಯವನ್ನು ಹಾಳುಮಾಡಬಹುದು. ಅದನ್ನು ಮಾಡುವುದನ್ನು ನೀವು ತಪ್ಪಿಸಬೇಕು.

**ವೃಷಭ:** ಸಂಗಾತಿಯೊಡನೆ ಚಲನಚಿತ್ರ - ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು. ಸಂಗಾತಿಯು ಸಂತೋಷ ನೀಡಲು ಪ್ರಯತ್ನ ಮಾಡಿದಾಗಿನ ಪೂರ್ಣ ಸಂತೋಷದ ಒಂದು ದಿನ.

**ಮಿಥುನ:** ಸಂತೋಷದಿಂದಿರಲು ನಿಮ್ಮ ಆಕಾಂಕ್ಷೆಗಳನ್ನು ಪರಿಶೀಲಿಸಿ. ಯೋಗದ ಸಹಾಯ ತೆಗೆದುಕೊಳ್ಳಿ ಇದು ನಿಮಗೆ ದೈಹಿಕವಾಗಿ, ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ನಿಮ್ಮ ಮನೋಧರ್ಮವನ್ನು ಸುಧಾರಿಸುವ ಆರೋಗ್ಯಕರ ಜೀವನ ಕಲೆ ಕಲಿಸುತ್ತದೆ. ವಿಭಿನ್ನ ರೀತಿಯ ಪ್ರಣಯವನ್ನು ಅನುಭವಿಸುವ ಸಾಧ್ಯತೆಯಿದೆ.

**ಕರ್ಕಾಟಕ:** ಪತ್ನಿಯ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಅವಳಿಗೆ ಕೋಪ ತರಬಹುದಾದ್ದರಿಂದ ಹಾಗೆ ಮಾಡಬೇಡಿ. ನಿಮ್ಮ ಕೆಲಸ ನೋಡಿಕೊಳ್ಳುವುದು ಉತ್ತಮ. ಆದಷ್ಟು ಕಡಿಮೆ ಹಸ್ತಕ್ಷೇಪ ಮಾಡಿ, ಇಲ್ಲದಿದ್ದರೆ ಅದು ಅವಲಂಬನೆಯನ್ನು ಉಂಟುಮಾಡಬಹುದು. ನೀವು ಇಂದು ನಿಮಗೆ ನೀಡಲಾದ ಹೂಡಿಕೆಯ ಯೋಜನೆಗಳ ಬಗ್ಗೆ ಚೆನ್ನಾಗಿ ಆಲೋಚಿಸಬೇಕು.

**ಸಿಂಹ:** ಇಂದು ನೀವು ಪ್ರಮುಖ ನಿರ್ಧಾರ ಕೈಗೊಳ್ಳಬೇಕು ಇದು ನಿಮ್ಮನ್ನು ಒತ್ತಡ ಹಾಗೂ ಉದ್ವೇಗಕ್ಕೆ ಒಳಪಡಿಸುತ್ತದೆ. ಭವಿಷ್ಯದಲ್ಲಿ ನೀವು ಆರ್ಥಿಕವಾಗಿ ಬಲವಾಗಿರಬೇಕೆಂದು ಬಯಸಿದರೆ ಇಂದಿನಿಂದಲೇ ಹಣವನ್ನು ಉಳಿಸಿ. ಹೆಂಡತಿ ನಿಮ್ಮ ಜೀವನವನ್ನು ಬದಲಾಯಿಸಲು ಸಹಾಯ ಮಾಡುತ್ತಾಳೆ. ಪ್ರೀತಿಯ ಶಕ್ತಿ ನಿಮಗೆ ಪ್ರೀತಿಸಲು ಒಂದು ಕಾರಣ ನೀಡುತ್ತದೆ.

**ಕನ್ಯಾ:** ಆರೋಗ್ಯವು ಇತರರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಮೂಲಕ ಅರಳುತ್ತದೆ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಕಲ್ಪನೆಗಳ ಹಿಂದೆ ಓಡಬೇಡಿ ಹಾಗೂ ಸಾಧ್ಯವಾದಷ್ಟೂ ವಾಸ್ತವವಾದಿಗಳಾಗಿರಿ. ನಿಮ್ಮ ಸ್ನೇಹಿತರ ಜೊತೆ ಸಮಯ ಕಳೆಯಿರಿ ಇದು ಒಳ್ಳೆಯದನ್ನು ಮಾಡುತ್ತದೆ.

**ತುಲಾ:** ಕೆಲಸದ ನಡುವೆ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ ಮತ್ತು ತಡರಾತ್ರಿ ಕೆಲಸ ಮಾಡುವುದನ್ನು ತಪ್ಪಿಸಿ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ. ಮನೆಯ ಸದಸ್ಯರೊಬ್ಬರ ವರ್ತನೆಯಿಂದ ನೀವು ತೊಂದರೆಗೊಳಗಾಗಬಹುದು.

**ವೃಶ್ಚಿಕ:** ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ವಿಶ್ವಾಸ ಮತ್ತು ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ಭಯ, ದ್ವೇಷ, ಅಸೂಯೆ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ. ಪ್ರಾಚೀನ ವಸ್ತುಗಳು ಮತ್ತು ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ.

**ಧನು:** ಮಕ್ಕಳು ನಿಮ್ಮ ಸಂಜೆಯನ್ನು ಉಲ್ಲಾಸಮಯವಾಗಿಸುತ್ತಾರೆ. ಮಂಕು ಕವಿದ ಮತ್ತು ಒತ್ತಡದ ದಿನಕ್ಕೆ ಮಂಗಳ ಹಾಡಲು ಒಂದು ಸಂತೋಷಕೂಟವನ್ನು ಯೋಜಿಸಿ. ಮಕ್ಕಳ ಸಾಂಗತ್ಯ ನಿಮ್ಮ ದೇಹವನ್ನು ಪುನಃಶ್ಚೇತನಗೊಳಿಸುತ್ತದೆ. ದುಂದುಗಾರಿಕೆ ಮತ್ತು ಸಂಶಯಾಸ್ಪದವಾದ ಹಣಕಾಸು ಯೋಜನೆಗಳನ್ನು ತಪ್ಪಿಸಿ. ಸೋದರಿಯ ಪ್ರೀತಿ ನಿಮ್ಮನ್ನು ಉತ್ತೇಜಿಸುತ್ತದೆ.

**ಮಕರ:** ನಗುವಿನ ಚಿಕಿತ್ಸೆ ಎಲ್ಲಾ ಸಮಸ್ಯೆಗಳಿಗೂ ಮದ್ದಾಗಿರುವುದರಿಂದ ನಿಮ್ಮ ಅನಾರೋಗ್ಯ ಗುಣಪಡಿಸಲು ನಗುವಿನ ಚಿಕಿತ್ಸೆ ಬಳಸಿ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ನಿಮ್ಮ ಆಹ್ಲಾದಕರ ವರ್ತನೆ ಕುಟುಂಬ ಜೀವನವನ್ನು ಬೆಳಗುತ್ತದೆ. ಕೆಲವೇ ಜನರು ಇಂಥ ಪ್ರಾಮಾಣಿಕ ನಗುವಿರುವ ವ್ಯಕ್ತಿಯನ್ನು ನಿರ್ಲಕ್ಷಿಸಬಲ್ಲರು.

**ಕುಂಭ:** ನಿಮ್ಮ ಹೆಚ್ಚು ಆತ್ಮವಿಶ್ವಾಸವನ್ನು ಇಂದು ಚೆನ್ನಾಗಿ ಬಳಸಿಕೊಳ್ಳಲು ಪ್ರಯತ್ನಿಸಿ. ಒತ್ತಡದ ದಿನದ ಹೊರತಾಗಿಯೂ ನೀವು ನಿಮ್ಮ ಚೈತನ್ಯವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ಹೂಡಿಕೆ ಶಿಫಾರಸು ಮಾಡಲಾಗಿದ್ದರೂ ಸರಿಯಾದ ಸಲಹೆ ಪಡೆಯಬೇಕು. ಒಂದು ಅಂಚೆಯ ಮೂಲಕ ಬಂದ ಪತ್ರ ಇಡೀ ಕುಟುಂಬಕ್ಕೆ ಸಂತೋಷದ ಸುದ್ದಿ ತರುತ್ತದೆ.

**ಮೀನ:** ನಿಮ್ಮ ಸಂಗಾತಿಯ ನಿಷ್ಠಾವಂತ ಹೃದಯ ಮತ್ತು ಅದ್ಭುತ ಚೈತನ್ಯ ನಿಮಗೆ ಸಂತೋಷ ನೀಡಬಹುದು. ಇಂದು ಹಣದ ನಷ್ಟವು ಸಂಭವಿಸಬಹುದು. ಆದ್ದರಿಂದ ವಹಿವಾಟುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ನೀವು ಎಷ್ಟು ಜಾಗರೂಕರಾಗಿರುತ್ತೀರೋ ಅಷ್ಟೇ ನಿಮಗೆ ಉತ್ತಮವಾಗಿರುತ್ತದೆ ನಿಮ್ಮ ಜ್ಞಾನ ಮತ್ತು ಒಳ್ಳೆಯ ಹಾಸ್ಯ ನಿಮ್ಮ ಬಳಿಯಿರುವ ಜನರನ್ನು ಆಕರ್ಷಿಸಬಹುದು.

## ಕಿಟಕಿಯಲ್ಲಿ ಕುಳಿತು ಕಾಫಿ ಕುಡಿಯುತ್ತಿದ್ದ ಕಾಲದ ಕಥಾನಕ

ಇದು ನಮ್ಮ ಊರಿನ ಮನೆಯ ಒಳಗಿನ ಹಜಾರದ ಚಿತ್ರ. ಚಿತ್ಪಾವನಿಯಲ್ಲಿ ಇದನ್ನು ಆಂತ್ಲಿ ಮಾಳಿ ಅನ್ನುವುದು. ನಾನು ಚಿಕ್ಕವನಾಗಿದ್ದಾಗ ಅಲ್ಲಿಯ ಕಿಟಕಿಯಲ್ಲಿ ಕುಳಿತು ಕಾಫಿ ಕುಡಿಯುತ್ತಿರುವುದನ್ನು ಈ ಎಐ ಚಿತ್ರದಲ್ಲಿ ನೋಡುತ್ತಿದ್ದೀರಿ. ಕಿಟಕಿಯಲ್ಲಿ ಕುಳಿತು? ಹೌದು, ಸರಿಯಾಗಿಯೇ ಓದಿದ್ದೀರಿ. ಒಂದು ಗಜ ದಪ್ಪದ ಮಣ್ಣಿನ ಗೋಡೆಯ ಮನೆಗಳ ಕಿಟಕಿಗಳು ಹೀಗೆಯೇ ಇರುತ್ತಿದ್ದುದು. ಅದರಲ್ಲಿ ಕುಳಿತು ಕಾಫಿ ಕುಡಿಯುವುದೇನು, ಒಂದು ಸಣ್ಣ ಎಲೆ ಹಾಕಿ ಊಟ ಮಾಡುವಷ್ಟು ಅಗಲದ ಜಾಗ ಇರುತ್ತಿತ್ತು. 1967 ರಲ್ಲಿ ಆ ಮನೆಗೆ ವಿದ್ಯುತ್ತಿನ ವಯರಿಂಗ್ ಮಾಡುವಾಗ ಗೋಡೆಗೆ ತೂತು ಕೊರೆಯುವ ಪೈಪಿನ ಉದ್ದ ಸಾಕಾಗದೆ ಅರ್ಧ ಈ ಕಡೆಯಿಂದ, ಅರ್ಧ ಆ ಕಡೆಯಿಂದ ಕೊರೆಯಬೇಕಾಗಿ ಬಂದಿತ್ತು!

ಊಟದ ಮನೆಯೂ ಆಗಿದ್ದ ಇಲ್ಲಿ ಈ ಕಿಟಕಿಯ ಬುಡ ನಾನು ಊಟಕ್ಕೆ ಕುಳಿತುಕೊಳ್ಳುವ ಶಾಶ್ವತ ಜಾಗ ಆಗಿತ್ತು. ಆಗ ಚಿಕ್ಕವರು ಮಣೆಯ ಮೇಲೆ ಕೂತು ಉಣ್ಣುವ ಪರಿಪಾಠ ಇಲ್ಲದಿದ್ದರೂ ನನಗೆ ನಿತ್ಯವೂ ಮಣೆ ಬೇಕೇ ಬೇಕಿತ್ತು. ಕಿಟಕಿ ಬದಿಯ ಸಾಲಿನಲ್ಲಿ ಚಿಕ್ಕ ಮಕ್ಕಳು, ಎದುರುಗಡೆ ಸಾಲಿನಲ್ಲಿ ತಂದೆಯವರು, ಅಣ್ಣಂದಿರು ಕುಳಿತುಕೊಳ್ಳುತ್ತಿದ್ದರು. ಎಲ್ಲರಿಗೂ ಅವರವರ ನಿಶ್ಚಿತ ಜಾಗಗಳಿದ್ದವು.

ದೇವರ ಕೋಣೆಯೂ ಇದೇ ಆಗಿತ್ತು. ಎಡ ಮೂಲೆಯಲ್ಲಿ ಕಾಣಿಸುವ ಕಪ್ಪು ಬಣ್ಣದ ಕಪಾಟಿನ ಒಳಗೆ ದೇವರ ಮಂಟಪ. ಕೆಂಪು ಬಣ್ಣದ ಚೌಕಾಕಾರದ ಸಿಮೆಂಟೇ ದೇವರ ಕೋಣೆಯನ್ನು ಬೇರ್ಪಡಿಸುವ ಡೆಮೋಕ್ರೇಷನ್. ದೇವರ ಮಂಟಪದ ಮೇಲ್ಭಾಗದಲ್ಲೂ ಕಪಾಟು ಇತ್ತು. ಕೆಳಗೆ ಶಾಶ್ವತವಾಗಿ ನಂದಾದೀಪ ಉರಿಯುತ್ತಿದ್ದುದರಿಂದ ಅದರೊಳಗೆ ಇಟ್ಟಿರುವ ವಸ್ತುಗಳೆಲ್ಲ ಬೂಸ್ಟು ಹಿಡಿಯದೆ ಬೆಚ್ಚಗಾಗಿ ಇರುತ್ತಿದ್ದವು.

ನಮ್ಮಲ್ಲಿ ನಿತ್ಯ ನಡೆಯುತ್ತಿದ್ದ ಷೋಡಶೋಪಚಾರ ಪೂಜೆಯ ಜೊತೆಗೆ ಸೋಮವಾರಗಳಂದು ರುದ್ರಾಭಿಷೇಕವೂ ಇರುತ್ತಿತ್ತು. ಪೂಜೆಯ ಕೊನೆಯಲ್ಲಿ ನೈವೇದ್ಯದ ಸಮಯ ಊದುಬತ್ತಿ, ಕರ್ಪೂರಗಳ ಸುವಾಸನೆ, ಬಿಸಿ ಬಿಸಿ ಅನ್ನದ ಹಬೆ, ಅಡುಗೆಮನೆಯಿಂದ ಬರುವ ಒಗ್ಗರಣೆಯ ಘಮ ಇವೆಲ್ಲ ಸೇರಿ ಒಂದು ದೈವಿಕ ವಾತಾವರಣ ಸೃಷ್ಟಿಯಾಗುತ್ತಿತ್ತು.

ಪ್ರತಿ ಶುಕ್ರವಾರ ರಾತ್ರಿ, ಲಕ್ಷ್ಮೀನಾರಾಯಣ ಹೃದಯ ಗ್ರಂಥದ ಪಾರಾಯಣ ಇರುತ್ತಿತ್ತು. ಅದರಲ್ಲಿ ಬರುವ ಘಟು ಕುರು ಕುರು ಸ್ವಾಹಾ ಎಂಬ ಸಾಲುಗಳು ನಮಗೆಲ್ಲರಿಗೂ ಕಂಠಪಾಠವಾಗಿದ್ದವು! ಆ ಪುಸ್ತಕದಲ್ಲಿ ದೇವಿಯು ಚಂಡ ಮುಂಡರನ್ನು ವಧಿಸುವ ಸುಂದರವಾದ ವರ್ಣ ಚಿತ್ರವೊಂದಿತ್ತು. ಅದನ್ನು ತೋರಿಸುವಂತೆ ನಾವು ತಂದೆಯವರನ್ನು ಕೇಳುವುದಿತ್ತು. ಪಾರಾಯಣದ ಒಂದು ಹಂತದಲ್ಲಿ ಚಿಟಿಕೆಯಷ್ಟು ಮಂತ್ರಿಸಿದ ಭಸ್ಮವನ್ನು ತಂದೆಯವರು ನಮ್ಮ ಬಾಯಿಗೆ ಹಾಕುತ್ತಿದ್ದರು. ಶುಕ್ರವಾರದ ಪಾರಾಯಣ, ಚೌತಿ, ನವರಾತ್ರಿ ಮತ್ತು ನವಾನ್ನ ಪೂಜೆಯ ದಿನ ಮಾತ್ರ ಮಂಗಳಾರತಿಯ ಸಮಯ ಜಾಗಟೆ ಬಾರಿಸುವುದು ನಮ್ಮಲ್ಲಿದ್ದ ಅಲಿಖಿತ ನಿಯಮ.

ಚೌತಿಯ ಗಣೇಶ ಹೊರಗಿನ ಹಜಾರದಲ್ಲಿ ಪೂಜಿಸಲ್ಪಡುತ್ತಿದ್ದರೂ ಸಣ್ಣ ಮಂಟಪವೊಂದರಲ್ಲಿ ಹರತಾಳಿಕಾ ಗೌರಿ ಪೂಜೆ ಇಲ್ಲೇ ನಡೆಯುತ್ತಿತ್ತು. ನವರಾತ್ರಿ ಪೂಜೆ ನಿತ್ಯದ ದೇವರ ಮಂಟಪದಲ್ಲೇ ನಡೆಯುತ್ತಿದ್ದುದು. ಆಗ ನೀಲಿ ನಾಮದ ಗೋರಟೆ, ಹಳದಿ ಮೈಸೂರು ಗೋರಟೆ ಮತ್ತು ಕೆಂಪು ಕೇಪುಳ ಹೂಗಳ ಮಾಲೆಗಳಿಂದ ಮಂಟಪವನ್ನು ಅಲಂಕರಿಸಲಾಗುತ್ತಿತ್ತು. ಮರದ ತುಂಡೊಂದನ್ನು ಕೆತ್ತಿ ಒಂದು ಬ್ಯಾಟರಿ ಬಾಕ್ಸು ಮತ್ತು ಗೆರಟೆ ಹಾಗೂ ಒಂದು ಹಳೆಯ ಸ್ಪ್ರಿಂಗ್ ಉಪಯೋಗಿಸಿ ಒಂದು ಟಾಗಲ್ ಸ್ವಿಚ್ಚು ತಯಾರಿಸಿ ನವರಾತ್ರಿ ಪೂಜೆಯ ಹೊತ್ತಲ್ಲಿ ದೇವರ ಮೇಲೆ ಬಲ್ಬಿನ ಬೆಳಕು ಬೀಳುವ ವ್ಯವಸ್ಥೆ ನಮ್ಮಣ್ಣ ಮಾಡಿದ್ದರು. ಅದಕ್ಕೆ ರೇಡಿಯೋದ ನಿರುಪಯೋಗಿ ಬ್ಯಾಟರಿಯನ್ನು ಒಡೆದು ಅದರೊಳಗೆ ಇರುವ ಸೆಲ್ಲುಗಳನ್ನು ಅವರು ಉಪಯೋಗಿಸುತ್ತಿದ್ದರು.

ನವರಾತ್ರಿಯಲ್ಲಿ ಸಪ್ತಶತಿ ಪಾರಾಯಣ ನಡೆಯುತ್ತಿದ್ದುದು ಕಿಟಕಿಯಿಂದ ಸ್ವಲ್ಪ ಈಚೆಗೆ. ಪೂಜೆಮಾಡುವವರನ್ನುಳಿದು ಉಳಿದವರು ನಿತ್ಯ ಸಂಧ್ಯಾವಂದನೆ ಮಾಡುವ ಜಾಗವೂ ಅದೇ ಆಗಿತ್ತು. ಸಂಧ್ಯಾವಂದನೆಗೆ ಮೊದಲು ಹಗಲಿನಲ್ಲಿ ಗಂಧ, ರಾತ್ರೆ ಭಸ್ಮ ಧರಿಸುವ ಸಂಪ್ರದಾಯ ನಮ್ಮಲ್ಲಿತ್ತು.

ಬಾಣಂತಿಯರು ಶುದ್ಧ ಆದ ದಿನ ದೇವರೆದುರು ಕೂತು ಮನೆಯ ಸಣ್ಣ ಮಕ್ಕಳೆಲ್ಲರ ತಲೆಗೆ ಎಣ್ಣೆ ಹಚ್ಚಿ, ತುಪ್ಪದಲ್ಲಿ ಕಲಸಿದ ಶುಂಠಿಬೆಲ್ಲ ತಿನ್ನಲು ಕೊಡುವ ಕ್ರಮ ಇತ್ತು. ದೀಪಾವಳಿ ಸಮಯದಲ್ಲಿ ತೈಲಾಭ್ಯಂಗದ ದಿನ ಸ್ನಾನಾರಂಭಕ್ಕೆ ಮೊದಲು ಮನೆಯ ಕಿರಿಯ ಬಾಲಕನು ದೇವರೆದುರು ಭೂಮಿಯ ಮೇಲೆ ಎಣ್ಣೆಯ ಬೊಟ್ಟುಗಳನ್ನು ಇಟ್ಟು ಅರಸಿನ ಕುಂಕುಮ, ಹೂಗಳನ್ನು ಏರಿಸಿ ಭೂಮಿ ಪೂಜೆ ಮಾಡುವ ಪದ್ಧತಿ ಇತ್ತು. ನಾನು ಕಿಶೋರನಾಗಿರುವಷ್ಟು ಸಮಯ ಈ ಅವಕಾಶ ನನ್ನ ಪಾಲಿಗೆ ಬರುತ್ತಿತ್ತು.

ದೇವರ ಮಂಟಪದ ಪಕ್ಕದಲ್ಲಿ ಬಲಬದಿಗೆ ಕುಡಿಯುವ ನೀರನ್ನು ತುಂಬಿಡುವ ರಾಂಧಣೆ ಎನ್ನುವ ಮಣ್ಣಿನ ದೊಡ್ಡ ಪಾತ್ರೆ ಇಡುವ ಜಾಗ. ಅದರ ಮೇಲ್ಗಡೆ ತಾಯಿಯವರು ಮಾಡುತ್ತಿದ್ದ ಕೆಲವು ವಿಶೇಷ ಪೂಜೆಗಳಿಗಾಗಿ ಒಂದು ಸಣ್ಣ ದೇವರ ಗೂಡು. ಅದರಿಂದಾಚೆ ಅಡುಗೆ ಮನೆಗೆ ಹೋಗುವ ಬಾಗಿಲು.

ಅಡುಗೆ ಮನೆಯ ಬಾಗಿಲ ಬಲಬದಿಯಲ್ಲೊಂದು ಸಣ್ಣ ಕಂಬ ನೆಟ್ಟದ್ದು ಕಾಣಿಸುತ್ತಿದೆಯಲ್ಲವೇ? ಚಿತ್ಪಾವನಿಯಲ್ಲಿ ಇದರ ಹೆಸರು ತಾಕ್ಕಮೀಠ. ಇದಕ್ಕೆ ಕಡಗೋಲು ಕಟ್ಟಿಯೇ ರಂಗನಾಯಕ ರಾಜೀವ ಲೋಚನ ಎಂದು ಹಾಡುತ್ತಾ ಮನೆಯ ಮಹಿಳೆಯರು ಭರಣಿಯಲ್ಲಿ ಮಜ್ಜಿಗೆ ಕಡೆಯುತ್ತಿದ್ದುದು. ಚಿಕ್ಕ ಮಕ್ಕಳ ತಿಂಗಳ ಹುಟ್ಟುಹಬ್ಬಗಳ ಆಚರಣೆ ಇದರ ಎದುರೇ ನಡೆಯುತ್ತಿದ್ದುದು. ಅದರ ಮೇಲ್ಗಡೆ ಕಾಣಿಸುತ್ತಿರುವ ಸಣ್ಣ ಗೂಡು, ಒಳಗಡೆ ಕನ್ನಡಿ ಅಳವಡಿಸಿದ ಅರಸಿನ ಕುಂಕುಮದ ಪೆಟ್ಟಿಗೆ ಇಡುವ ಜಾಗ.

ಈ ಫೋಟೊದಲ್ಲಿ ಕಾಣಿಸುವ ಭಾಗಕ್ಕಿಂತ ಸ್ವಲ್ಪ ಹಿಂದೆ ಗೋಡೆ ಬದಿಯಲ್ಲಿ ಹೆಚ್ಚುವರಿಯಾಗಿ ನಿಲ್ಲಿಸಿದ ಕಂಬವೊಂದು ಇತ್ತು. ಚಿಕ್ಕ ಮಕ್ಕಳು ಕಂಬ ಮತ್ತು ಗೋಡೆಯ ನಡುವಿನ ಸಂದಿಯಲ್ಲಿ ನುಸಿಯುವ ಆಟ ಆಡುವುದಿತ್ತು. ಆ ಕಂಬಕ್ಕೆ ಸ್ವಲ್ಪ ಬೆಣ್ಣೆಯನ್ನು ಮೆತ್ತಿಟ್ಟು ನೀರೆಲ್ಲ ಇಳಿದ ಮೇಲೆ ಅದರಲ್ಲಿ ಸಾಲಿಸಿಲಿಕ್ ಎಸಿಡ್ ಬೆರೆಸಿ ಫಂಗಸ್‌ನಿಂದ ಉಂಟಾಗುವ ಸಿಬ್ಬದಂಥ ಸಮಸ್ಯೆಗಳಿಗೆ ಔಷಧಿಯಾಗಿ ಬಳಸಲಾಗುತ್ತಿತ್ತು.

ಇನ್ನೂ ಹಿಂದಕ್ಕೆ ಹೋದರೆ ವೇದಮಂತ್ರಗಳ ಅಮೂಲ್ಯ ಗ್ರಂಥಗಳನ್ನು ಇಡುವ ಮರದ ಕಪಾಟು ಇತ್ತು. ಆಗಿನ ಗ್ರಂಥಗಳೆಂದರೆ ಹೊಲಿಗೆ ಹಾಕಿ ಬೈಂಡ್ ಮಾಡಿದ ಪುಸ್ತಕಗಳಲ್ಲ. ಬಿಡಿ ಹಾಳೆಗಳನ್ನು ಅಚ್ಚುಕಟ್ಟಾಗಿ ಜೋಡಿಸಿ ಮೇಲೊಂದು ಕೆಳಗೊಂದು ಹಾಳೆಗಳ ಆಕಾರದ್ದೇ ಮರದ ತೆಳ್ಳಗಿನ ಹಲಗೆಗಳನ್ನಿಟ್ಟು ನಾರು ಬಟ್ಟೆಯಿಂದ ಗಟ್ಟಿಯಾಗಿ ಸುತ್ತಿ ಹಗ್ಗದಿಂದ ಬಿಗಿದ ವೇಷ್ಟಣಗಳು ಅವು. ಪುಸ್ತಕದ ಹುಳಗಳು ಬರದಂತೆ ಹಾವಿನ ಪೊರೆಯನ್ನು ಪುಟಗಳ ಮಧ್ಯೆ ಇರಿಸುವ ಕ್ರಮ ಇತ್ತು.



ಈ ಕಪಾಟಿನ ಪಕ್ಕದಲ್ಲೇ ಪ್ರತಿಸಂವತ್ಸರಿಕ ಶ್ರಾದ್ಧ, ಮಹಾಲಯಗಳು ನಡೆಯುತ್ತಿದ್ದುದು.

ಇನ್ನೂ ಹಿಂದೆ ಹೋದರೆ ಪಾತ್ರೆಗಳ ಕೋಣೆಗೆ ಹೋಗುವ ಬಾಗಿಲು. ಹೆಸರೇ ಸೂಚಿಸುವಂತೆ ದಿನನಿತ್ಯದ ಅಗತ್ಯಕ್ಕೆ ಬೇಕಾಗದ ಪಾತ್ರೆಗಳನ್ನಿರಿಸುವ ಕೋಣೆ ಇದು. ತಂದೆಯವರು ವೀಳ್ಯಕ್ಕೆ ಉಪಯೋಗಿಸುತ್ತಿದ್ದ ಹೊಗೆಸೊಪ್ಪನ್ನು ಶೇಖರಿಸಿಡುವ ಭರಣಿ ಈ ಕೋಣೆಯಲ್ಲೇ ಇರುತ್ತಿದ್ದುದು. ಈ ಕೋಣೆಯಲ್ಲಿರುತ್ತಿದ್ದ ಮರದ ಪೆಟ್ಟಿಗೆಯೊಂದು ಚೌತಿಯ ಗಣಪನನ್ನು ಮಂಟಪದ ಹಿಂದೆ ಎತ್ತರದಲ್ಲಿ ಕೂರಿಸುವ ಪೀಠವಾಗಿ ಉಪಯೋಗಿಸಲ್ಪಡುತ್ತಿತ್ತು.

## ಬೆಲೆ ಕಟ್ಟಲಾಗದ್ದು

ಪ್ರಿಯ ಸಾಫ್ಟವೇರ್ ಇಂಜಿನಿಯರ್ ಆಗಿ ತನ್ನ ಮೊದಲ ತಿಂಗಳ ಸಂಬಳದಲ್ಲಿ ತಂದೆಗೆ 25,000 ದ ಆಂಡ್ರಾಯ್ಡ್ ಮೊಬೈಲ್ ಗಿಫ್ಟ್ ಕೊಟ್ಟಳು. ಅದರ ಫೋಟೋ ತೆಗೆದು ತನ್ನ ಸ್ಟೇಟಸ್ಗೆಲ್ಲಾ ಹಾಕಿಕೊಂಡು ತಿರುಗಾಡು ತಿದ್ದಳು.. ಲಕ್ಕಿ ಫಾದರ್, ಎಂದು ಅನೇಕ ಕಾಂಪ್ಲಿಮೆಂಟ್ ಗಳು,, ಫುಲ್ ಆಗಿತ್ತು ಇನ್ಬಾಕ್ಸ್...ಇವಳ ಖುಷಿ ಹೆಚ್ಚಾಗಿತ್ತು.

ಅಪ್ಪ ಮರದ ಮಿಲ್ಲಲ್ಲಿ ಕೆಲಸ ಮಾಡಿ... ತನ್ನನ್ನು ಸಾಕಿದ್ದು, ಕುಟುಂಬ ನಿರ್ವಹಣೆ ಮಾಡುತ್ತಿ ದ್ದುದ್ದು, ಅಕ್ಕ, ಅಣ್ಣನನ್ನು ಓದಿಸಿದ್ದು.. ತನ್ನ ಕಾಲೇಜು ಫೀಸ್ ಕಟ್ಟಲು ಸಾಲ ಮಾಡಿ ರಾತ್ರಿ ಎಕ್ಸ್ಟ್ರಾ ಡ್ಯೂಟಿ ಮಾಡಿ ಸಾಲದ ಕಂತು ಕಟ್ಟಿದ್ದುದು. ಎಲ್ಲಾ ನೆನಪಿತ್ತು ಆಕೆಗೆ...3 ದಿನ ಕಳೆದರೂ ತಾನು ಕೊಟ್ಟ ಹೊಸ ಮೊಬೈಲ್ ಅನ್ನು ಉಪಯೋಗಿಸದೆ ಮೂಲೆಯಲ್ಲಿ ಇಟ್ಟು ಅದೇ ಡಬ್ಬ 1500 ರೂಪಾಯಿಯ ನೋಕಿಯಾ ಸೆಟ್, ಉಪಯೋಗಿಸುತ್ತಿದ್ದುದು ಅಂದು ಪ್ರಿಯಾಳ ಕಣ್ಣು ಕೆಂಪಾಗಿಸಿತ್ತು.

ಸೀದಾ ಹೋದವಳೇ ಏಕಾಏಕಿ ತಂದೆಯ ಕೈಯಿಂದ ಮೊಬೈಲ್ ಕಸಿದುಕೊಂಡು ನೆಲಕ್ಕೆಸೆದು ಬಿಟ್ಟಳು.... ಮೊಬೈಲ್ ಎರಡು ಭಾಗವಾಗಿತ್ತು....ಮೇಲಿಟ್ಟಿದ್ದ ತಾನು ಕೊಟ್ಟ ಮೊಬೈಲ್ ಕೊಟ್ಟು.. ಇನ್ನಾದರೂ ಇದನ್ನು ಉಪಯೋಗಿಸಿ. ಮಗಳು ಮೊದಲ ಸಂಬಳದಲ್ಲಿ ಪ್ರೀತಿಯಿಂದ ಕೊಟ್ಟ ಉಡುಗೊರೆ ಅದು...ಅದನ್ನು ಮೂಲೆಯಲ್ಲಿಟ್ಟು ನನಗೆ ಅವಮಾನ ಮಾಡಬೇಡಿ ಎಂದು ಕೂಗಿದಳು...

ಅವಳ ರೌದ್ರಾವತಾರ.. ತಂದೆಯನ್ನು ಮೌನವಾಗಿಸಿತ್ತು.... ಸಪ್ಪಗಿನ ಮೋರೆಯಲ್ಲಿ ಒಡೆದ ಮೊಬೈಲ್ನ ಚೂರುಗಳನ್ನೇ ನೋಡುತ್ತಿದ್ದರು ಅವರು .... ಮಗಳು ಸಿಟ್ಟಲ್ಲಿ ತನ್ನ ರೂಮಿಗೆ ಹೋದಳು. ತಾಯಿಗೆ ಏನನ್ನಿಸಿತೋ ಏನೋ ನೇರ ಮಗಳ ರೂಮಿಗೆ ಹೋಗಿ ಬಾಗಿಲು ಹಾಕಿದಳು. ತಮ್ಮ ಮಾತುಕತೆ ಅವರಿಗೆ ಗೊತ್ತಾಗಬಾರದು ಎಂಬುದಷ್ಟೇ ಆಕೆಯ ಆಸೆಯಾಗಿತ್ತು.

ತಾಯಿಯ ಕಣ್ಣು ಕೆಂಪಾಗಿತ್ತು.... ಪ್ರಿಯ ನೀನು ಮಾಡಿದ್ದು ತಪ್ಪು... ನಿನ್ನ ತಂದೆ ನಿನಗಾಗಿ ತಮ್ಮ ಜೀವನವನ್ನೇ ಸವೆಸಿದ್ದಾರೆ, ಇವತ್ತಿಗೂ 65 ವರ್ಷ ವಯಸಾದರೂ ಕೆಲಸಕ್ಕೆ ಹೋಗಿ ನಿನ್ನ ವಿದ್ಯಾಭ್ಯಾಸ ಹಾಗೂ ಇತರ ಖರ್ಚಿಗೆ ಮಾಡಿದ್ದ ಸಾಲ ತೀರಿಸುತ್ತಿದ್ದಾರೆ. ಅದೇ ಡಬ್ಬ ಮೊಬೈಲ್ ಅನ್ನು ಕಳೆದ 5 ವರ್ಷದಿಂದ ಬಳಸುತ್ತಿದ್ದಾರೆ ಅವರು.. ಅದೆಷ್ಟೋ ರಬ್ಬರ್ ಬ್ಯಾಂಡ್‌ಗಳು ಇದ್ದವು ಅದರಲ್ಲಿ ಆದರೂ ಅದನ್ನು ಅಷ್ಟೊಂದು ಪ್ರೀತಿಸುತ್ತಿದ್ದರು ಅವರು... ನೀನು ಮೊಬೈಲ್ ತೆಕ್ಕೊಟ್ಟ 25,000 ದ್ದು ಆದರೆ ಅವರಿಗೆ ಕಣ್ಣಿನ ದೃಷ್ಟಿ ಸಮಸ್ಯೆ ಇದೆ ಕನ್ನಡಕ ಚೇಂಜ್ ಮಾಡಬೇಕೆಂದು ಡಾಕ್ಟರ್ ಹೇಳಿ 8 ತಿಂಗಳೇ ಕಳೆದಿದೆ. ಆ ಕನ್ನಡಕದಲ್ಲಿ ಸರಿಯಾಗಿ ತೋರುತ್ತಿರಲಿಲ್ಲ, ಹಾಗಾಗಿ ಹಳೆಯ ಮೊಬೈಲ್ ಅನ್ನೆ ಬಳಸುತ್ತಿದ್ದರು ಅವರು... ಅಲ್ಲಿಯ ಸಂಖ್ಯೆಗಳು ಅವರಿಗೆ ಕಂಠ ಪಾಠವಾಗಿತ್ತು.. ಹಾಗಾಗಿ ನೀನು ಕೊಟ್ಟ ಮೊಬೈಲ್ ತೆಗೆದಿರಲಿಲ್ಲ... ನಿನ್ನನ್ನು ಅವಮಾನ ಮಾಡಿದ್ದಲ್ಲ ನೆನಪಿಟ್ಟುಕೋ. ನಿನ್ನ ಸ್ಟೇಟಸ್‌ಗೆ ಹಾಕಿ ನಾಲ್ಕು ಜನರಿಗೆ ದೊಡ್ಡಸ್ತಿಕೆ ತೋರಿಸಲೋಸ್ಕರ 25,000 ದ ಮೊಬೈಲ್ ತೆಗೆದು ಕೊಟ್ಟೆ, ಅದನ್ನು ಉಪಯೋಗಿಸಿಲ್ಲ ಎಂದು ಅಷ್ಟು ಬೈದು ಅವರ ಮೊಬೈಲ್ ಪುಡಿ ಮಾಡಿ ಅವಮಾನಿಸಿದ್ದಿ....

ಅದರ ಬದಲು ಅಪ್ಪನ ಬಳಿ ಪ್ರೀತಿಯಿಂದ ಹೋಗಿ ನಾಲ್ಕು ಮಾತಾಡಿ ಅಪ್ಪ ನನ್ನ ಮೊದಲ ಸಂಬಳದಲ್ಲಿ ನಿಮಗೇನು ಬೇಕು ಎಂದು ಕೇಳಬಹುದಿತ್ತು,ಅಥವಾ 2,3 ಸಾವಿರ ವಷ್ಟೇ ಖರ್ಚು ಮಾಡಿ ಅಪ್ಪನಿಗೆ ಕನ್ನಡಕ ಕೊಡಿಸಿದ್ದರೆ ಖಂಡಿತಾ ಖುಷಿ ಪಡುತ್ತಿದ್ದರು.. ಅದು ಬಿಟ್ಟು ಅವರು ಪ್ರೀತಿಸುತ್ತಿದ್ದ ಮೊಬೈಲ್ ಒಡೆದು ಹಾಕಿದೆಯಲ್ಲ... ಇದು ಅಪ್ಪನಿಗೆ ಕೊಡುವ ಗೌರವಾನಾ ಥೂ.. ನಿನ್ನ ಜನ್ಮಕ್ಕಿಷ್ಟು... ಎಂದವಳೇ ಅಪ್ಪನಿಗೆ ಕೊಟ್ಟಿದ್ದ 25,000 ರೂಪಾಯಿಯ ಮೊಬೈಲ್ ಅನ್ನು ಮಗಳ ಮುಖಕ್ಕೆ ಎಸೆದು ಹೋಗಿದ್ದಳು ತಾಯಿ...ಸಿಟ್ಟಿನಿಂದ.

ತಾಯಿಯ ಮಾತುಗಳು ಈ ಬಾರಿ ಮಗಳ ಮನಸ್ಸನ್ನು ಘಾಸಿ ಗೊಳಿಸಿತ್ತು. ಅಲ್ಲೇ ಇದ್ದ ತಂದೆಯ ಕಪಾಟು ತೆರೆದು ನೋಡಿದಳು ಅದೇ 4,5 ಅಂಗಿಗಳು, ತೂತು ಬಿದ್ದ ಬನಿಯನು, ಅದೇ 2 ಪ್ಯಾಂಟುಗಳು... ಪ್ರಿಯಾಳ ಕಣ್ಣು ಒದ್ದೆಯಾಗಿಸಿತ್ತು, ಯಾಕೆಂದರೆ ಅಪ್ಪ ಯಾವತ್ತೂ ನಮಗೆ ಹೊಟ್ಟೆಗೆ ಬಟ್ಟೆಗೆ ಕಮ್ಮಿ ಮಾಡಿರಲಿಲ್ಲ, ಏನೋ ಯೋಚಿಸಿ ಹೊರ ಹೋದಳು.. ಮೆಟ್ಟಿಲು ಬಳಿ ಇದ್ದ ತೂತು ಬಿದ್ದ ಅಪ್ಪನ ಸ್ಲಿಪ್ಪರ್ ನೋಡುತ್ತಿದ್ದಂತೆ ಪ್ರಿಯಾಳ ಕಣ್ಣಾಲಿಗಳು ತುಂಬಿ ಬಂದಿದ್ದವು.

ಎಲ್ಲಿಗೋ ಹೋಗಿ ಸಂಜೆ ಮನೆಗೆ ಬಂದಳು... ಅಪ್ಪನಿಗೆ ಅವರ ಒಡೆದ ಮೊಬೈಲ್ ಅನ್ನು ತಾನೇ ರಿಪೇರಿ ಮಾಡಿ ತಂದಿದ್ದಳು... ಅಪ್ಪನ ಸಪ್ಪೆ ಮೋರೆ ಈ ಬಾರಿ ನಗುವಾಗಿ ಬದಲಾಗಿತ್ತು. ಅಪ್ಪ ಸಂಜೆ 5 ಗಂಟೆಗೆ ಕಣ್ಣಿನ ಆಸ್ಪತ್ರೆಯಲ್ಲಿ ಅಪಾಯಿಂಟ್ಮೆಂಟ್ ಇದೆ ರೆಡಿ ಆಗಿ ಎಂದವಳೇ ಅಲ್ಲೇ ಸೋಫಾದ ಮೇಲೆ ಮೊಬೈಲ್ ಹಿಡಿದು ಕೂತಳು.. ತಂದೆಯ ನಗು ಮುಖ ನೋಡಿ ಖುಷಿ ಪಟ್ಟಳು.. ಓರೆ ಕಣ್ಣಲ್ಲಿ ತಂದೆಯನ್ನೇ ಗಮನಿಸುತ್ತಿದ್ದಳು.

ತಂದೆ ಖುಷಿ ಖುಷಿಯಾಗಿ ಹೊರಡುತಿದ್ದರು.. ಮುಖ ತೊಳೆದರು ಬಟ್ಟೆಯ ಕಪಾಟಿನ ಬಾಗಿಲು ತೆರೆದರೆ ಅಲ್ಲಿ ಆಶ್ಚರ್ಯ ಕಾದಿತ್ತು ಅವರಿಗೆ. ತಮ್ಮ ಹಳೆಯ ಬಟ್ಟೆಯ ಜಾಗದಲ್ಲಿ ಹೊಸ ಬಟ್ಟೆ, ಪ್ಯಾಂಟ್, ಅಂಗಿ, ಬನಿಯನ್

ಬಗೆ ಬಗೆಯದ್ದು ಅಲ್ಲಿತ್ತು... ತಂದೆ ಖುಷಿ ಖುಷಿಯಾಗಿ ಅವುಗಳಲ್ಲೊಂದನ್ನು ಹಾಕಿ ಕೊಂಡರು.. ತಂದೆಯ ಮುಖದಲ್ಲಿ ಹೊಸ ಉಲ್ಲಾಸವಿತ್ತು..

ಅಮ್ಮನೂ ಬಂದಿದ್ದರು ಅಲ್ಲಿ... ಅಪ್ಪ ಏಕೋ ಇಂದು ತುಂಬಾ ಸುಂದರವಾಗಿ ಕಾಣುತ್ತಿದ್ದರು.. ಚಪ್ಪಲ್ ಹುಡುಕುತಿದ್ದವರಿಗೆ ಅಲ್ಲೇ ಇದ್ದ ಚೆಂದದ ಶೂ ಕಾಣಿಸಿರಲಿಲ್ಲ, ಮಗಳೇ ತೆಗೆದು ಕೊಟ್ಟಾಗ.. ಅಪ್ಪ ಮಗಳನ್ನು ಬಾಚಿ ತಬ್ಬಿಕೊಂಡಿದ್ದರು.. ಇಬ್ಬರ ಕಣ್ಣಲ್ಲೂ ನೀರಿತ್ತು. ಅಪ್ಪನನ್ನು ತನ್ನ ಸ್ಕೂಟಿಯಲ್ಲಿ ಕಣ್ಣಿನ ತಪಾಸಣೆಗೆ ಕರೆದೊಯ್ದಳು..

ಹಿಂತಿರುಗಿ ಅಮ್ಮನನ್ನು ನೋಡಿ ಒಂದು ಕಣ್ಣು ಹೊಡೆದಳು ಪ್ರಿಯ.. ಅಮ್ಮನ ಕಣ್ಣಲ್ಲೂ ನೀರಿತ್ತು... ಲೆಕ್ಕ ಹಾಕಿದಳು 15,000 ಮಾತ್ರ ಖರ್ಚಾಗಿತ್ತು... ನಿಜಕ್ಕೂ ಈ 15,000... ಆ 25,000 ದ ಮೊಬೈಲ್ ಗಿಂತ ಅಮೂಲ್ಯವಾಗಿ ಕಂಡಿತು ಪ್ರಿಯಳಿಗೆ.. ಮೊಬೈಲ್ ಸ್ಟೇಟಸ್ ತುಂಬಾ ಗೆಳೆಯರ ಲೈಕ್ಸ್‌ಗಳಿದ್ದವು. ತಕ್ಷಣ ಸ್ಟೇಟಸ್ ಡಿಲೀಟ್ ಮಾಡಿ ಬಿಟ್ಟಳು ಪ್ರಿಯ.. ಈ ಬಾರಿ ಬೆಲೆ ಬಾಳುವ ಉಡುಗೊರೆ... ಬೆಲೆ ಕಟ್ಟಲಾಗದ ಉಡುಗೊರೆ ಎದುರು ಸಪ್ಪೆಯಾಗಿ ಕಂಡಿತ್ತು ಅವಳಿಗೆ.

ನಿಜ ಅಲ್ಲವೇ... ಅದೆಷ್ಟೋ ಮಂದಿ ತಮಗೆ ಜೀವ, ಜೀವನ ಎರಡೂ ಕೊಟ್ಟ ತಂದೆ ತಾಯಿಯರಿಗೆ.. ಏನೋ ಒಂದು ಕೊಟ್ಟು... ಸ್ಟೇಟಸ್‌ಗೆ ಹಾಕಿ ಮೆರೆಯುತ್ತಾರೆ.. ಇನ್ನು ಕೆಲವರಂತೂ ನಮ್ಮ ತಂದೆ/ತಾಯಿ ನನ್ನೊಟ್ಟಿಗೆ ನನ್ನ ಮನೆಯಲ್ಲೇ ಇದ್ದಾರೆ ಎನ್ನುವುದುಂಟು.. ಅವರ ಉದ್ದೇಶ ತನ್ನ ಸ್ಟೇಟಸ್ ತೋರಿಸುವುದಷ್ಟೇ ಆಗಿರುವುದು ಮಾತ್ರ ನಿಜಕ್ಕೂ ವಿಪರ್ಯಾಸ. ನೀವು ಈ ಪ್ರಪಂಚಕ್ಕೆ ಬರಲು ಅವರೇ ಕಾರಣ ಎಂದಾದ ಮೇಲೆ ಅವರೆದುರು ನಿಮ್ಮ ಸ್ಟೇಟಸ್ ಅದ್ಯಾವ ಮಟ್ಟದ್ದು ಒಮ್ಮೆ ಯೋಚಿಸಿ.

ಇಂದಿನಿಂದಲೇ ಬದಲಾಗೋಣ.. ತಂದೆ, ತಾಯಿ ಜೊತೆ ನಾವಿದ್ದೇವೆ, ನಾವು ಒಟ್ಟಿಗೆ ಇದ್ದೇವೆ ಎಂದು ಹೇಳುವುದನ್ನು ರೂಡಿಸಿ ಕೊಳ್ಳಿ, ಹಾಗೆ.... ಬೆಲೆ ಬಾಳುವ ಉಡುಗೊರೆ ಬೇಡ, ಬೆಲೆ ಕಟ್ಟಲಾಗದ್ದನ್ನ ಕೊಟ್ಟು ನೋಡಿ.

**- ಸಂಪಿಗೆ ವಾಸು,** ಬಳ್ಳಾರಿ



# ಭಾವ ಲಹರಿ

## ದೀಪಗಳ ಹಬ್ಬ ದೀಪಾವಳಿ

ಭಾರತ ಮತ್ತು ಪ್ರಪಂಚದ ವಿವಿಧ ಭಾಗಗಳಲ್ಲಿ ಆಚರಿಸುವ ಅತ್ಯಂತ ಮಂಗಳಕರವಾದ ಹಬ್ಬಗಳಲ್ಲಿ ದೀಪಾವಳಿಯೂ ಒಂದಾಗಿದೆ. ಪ್ರಪಂಚದಾದ್ಯಂತ ಜನರು ಬಹಳ ಉತ್ಸಾಹ ಹಾಗೂ ಸಂಭ್ರಮದಿಂದ ಆಚರಿಸುವ ಹಬ್ಬವಾಗಿದೆ. ಇದು ಮುಖ್ಯವಾಗಿ ಹಿಂದುಗಳ ಹಬ್ಬವಾಗಿದ್ದರೂ, ಸಮಾಜದ ಎಲ್ಲ ವರ್ಗದ ಜನರು ಕೂಡಿಕೊಂಡು ಸಂತೋಷದಿಂದ ಆಚರಿಸುವ ಹಬ್ಬವಾಗಿದೆ.

ದೀಪಾವಳಿ ಎಂದರೆ ವಿಜಯದ ಸಂಕೇತ. ಕತ್ತಲೆ ಕಳೆದು ಬಾಳಲ್ಲಿ ಬೆಳಕು ಮೂಡುವ ದಿನ. ಅಂದರೆ ಕಷ್ಟಗಳು ಕಳೆದು ಸುಖ-ಸಮೃದ್ಧಿ ಬರುವ ದಿನ. ಹಾಗೆಯೇ ದೀಪಾವಳಿ ಎಂದರೆ ದೀಪಗಳ ಸಾಲುಗಳು ಹಾಗೂ ಮಣ್ಣಿನ ದೀಪಗಳು ಎಂದರ್ಥ. ದೀಪಾವಳಿಯ ಪೂರ್ವದಲ್ಲಿ ಎಲ್ಲರೂ ತಮ್ಮ ತಮ್ಮ ಮನೆ, ಅಂಗಡಿಗಳನ್ನು ಸ್ವಚ್ಛ ಮಾಡುತ್ತಾರೆ. ಐದು ದಿನ ಆಚರಿಸುವ ಈ ಹಬ್ಬದಲ್ಲಿ ಜನರು ಹೊಸ ಹೊಸ ಬಟ್ಟೆಯನ್ನು ಧರಿಸುತ್ತಾರೆ. ಮನೆಯಲ್ಲಿ ವಿವಿಧ ಸಿಹಿ ಭೋಜನ ಮಾಡುತ್ತಾರೆ. ಮನೆಯ ಮುಂದೆ ಪಟಾಕಿ ಸಿಡಿಸಿ ಸಂಭ್ರಮ ಪಡುತ್ತಾರೆ. ಮನೆಯ ಮುಂದೆ 5-7-9-11 ಹೀಗೆ ದೀಪಗಳನ್ನು ಹಚ್ಚುತ್ತಾರೆ. ದೀಪಾವಳಿಗೆ ಸರ್ಕಾರವು ರಜೆಯನ್ನು ನೀಡುತ್ತಿದೆ.

ಈ ತಿಂಗಳ ಅಕ್ಟೋಬರ್ 19 ರಿಂದ 26ರ ವರೆಗೆ ಸುಮಾರು ಎಂಟು ದಿನ ದೀಪಾವಳಿ ಹಬ್ಬ ಇರುತ್ತದೆ. ಅದರಲ್ಲಿ ಮುಖ್ಯವಾಗಿ ದಿನಾಂಕ 19 ರಂದು ರವಿವಾರ ನೀರು ತುಂಬುವ ಹಬ್ಬವಿದೆ. ಅಂದು ಮನೆಯಲ್ಲಿ ಕೊಡ, ಹಂಡೆ, ಪಾತ್ರೆ-ಪಗಡೆಗಳಲ್ಲಿ ಜನ ನೀರು ತುಂಬಿ ಪೂಜೆ ಸಲ್ಲಿಸುತ್ತಾರೆ. ಇದು ಸಾಯಂಕಾಲ ಆಚರಿಸುವ ನೀರು ತುಂಬುವ ಹಬ್ಬದ ದಿನದ ವಿಶೇಷತೆ. ಇದು ಸಮೃದ್ಧಿಯ ಸಂಕೇತದ ದಿನ. ದಿನಾಂಕ 20ರಂದು ಸೋಮವಾರ ನರಕ ಚತುರ್ದಶಿ ಹಬ್ಬವಿದೆ. ಅಂದು ಎಲ್ಲರೂ ಬೆಳಗ್ಗೆ ಬೇಗನೆ ಎದ್ದು ಅಭ್ಯಂಜನ ಸ್ನಾನ ಮಾಡುತ್ತಾರೆ. ಮನೆಯಲ್ಲಿ ದೇವರ ಪೂಜೆ ಮಾಡಿ, ಅಕ್ಕ-ತಂಗಿ ಹಾಗೂ ಹೆಣ್ಣು ಮಗಳಿಂದ ಮನೆಯ ಗಂಡು ಮಕ್ಕಳು ಆರತಿ ಮಾಡೀಕೊಳ್ಳುತ್ತಾರೆ. ಆನಂತರ ಸಿಹಿ ಭೋಜನ ಮಾಡುತ್ತಾರೆ.



ದಿನಾಂಕ 21ರಂದು ಮಂಗಳವಾರ ದೀಪಾವಳಿಯ ಅಮಾವಾಸ್ಯೆ ಇರುತ್ತದೆ. ಅಂಗಡಿಗಳಲ್ಲಿ ಹಿಂದಿನ ದಿನ ದಿನಾಂಕ 20 ರಂದು ಆ ರಾತ್ರಿಯೇ ಲಕ್ಷ್ಮಿ ಪೂಜೆ ಮಾಡುತ್ತಾರೆ. ಆದರೆ ಮನೆಗಳಲ್ಲಿ ಮಂಗಳವಾರ ದಿನಾಂಕ 21 ರಂದು ಅಮಾವಾಸ್ಯೆ ಪೂಜೆ ಮಾಡುವುದರೊಂದಿಗೆ, ಲಕ್ಷ್ಮೀದೇವಿಯ ಪೂಜೆಯನ್ನು ಮಾಡಿ ಐಶ್ವರ್ಯ, ಸಂಪತ್ತು ನೀಡಬೇಕೆಂದು ದೇವತೆಯಲ್ಲಿ ಪ್ರಾರ್ಥಿಸುತ್ತಾರೆ. ಅದರಂತೆ ದಿನಾಂಕ 22 ಬುಧವಾರ ದೀಪಾವಳಿಯ ಮೊದಲ ಪಾಡ್ಯೆ ಆಚರಿಸುತ್ತಾರೆ. ಕೊನೆಯದಾಗಿ ದಿನಾಂಕ 26ರಂದು ರವಿವಾರ ಕಡೆಯ ಪಾಡ್ಯೆ ಆಚರಿಸುವುದರೊಂದಿಗೆ ದೀಪಾವಳಿ ಹಬ್ಬ ಸಂತೋಷದಿಂದ ಮುಕ್ತಾಯಗೊಳ್ಳುತ್ತದೆ. ಈ ದೀಪಾವಳಿಯ ಸಂದರ್ಭದಲ್ಲಿ ಮನೆಯಲ್ಲಿ ಸಿಹಿ ಭೋಜನ, ವಿಧವಿಧ ಅಡಿಗೆಗಳನ್ನು ಮಾಡಿ ಸಂತೋಷದಿಂದ ಎಲ್ಲರೂ ಕೂಡಿಕೊಂಡು ಊಟ ಮಾಡುತ್ತಾರೆ.

**ದೀಪಾವಳಿ ಹಬ್ಬದ ಮಹತ್ವ:** ರಾಮನ ಪುನರಾಗಮನ ಅಸುರ ಚಕ್ರವರ್ತಿ ರಾವಣನನ್ನು ಯುದ್ಧದಲ್ಲಿ ಸೋಲಿಸಿದ ನಂತರ ರಾಮ, ಸೀತೆ, ಲಕ್ಷ್ಮಣ, ಹನುಮಂತರೊಂದಿಗೆ ರಾಜಧಾನಿ ಅಯೋಧ್ಯೆಗೆ ಮರಳಿ ಆಗಮಿಸಿದ ಪ್ರಯುಕ್ತ ಜನರು ಸಂತೋಷದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಅಂದು ಜನರು ಮನೆಯ ಮುಂದೆ ದೀಪಗಳನ್ನು ಹಚ್ಚಿ ಅವರನ್ನು ಸ್ವಾಗತಿಸಿದರು.

ಲಕ್ಷ್ಮಿ ಪೂಜೆ ದೀಪಾವಳಿಯಂದು ಬರುವ ಅಮಾವಾಸ್ಯೆ ದಿನ ಎಲ್ಲರೂ ಲಕ್ಷ್ಮಿ ಪೂಜೆಯನ್ನು ಮಾಡುತ್ತಾರೆ. ದೇವಿಗೆ ವಿವಿಧ ಆಭರಣಗಳನ್ನು ತೊಡಿಸಿ, ಸಿಹಿ ನೈವೇದ್ಯ ಮಾಡುತ್ತಾರೆ. ದೇವಿಗೆ ಕೈಮುಗಿದು ಸಂಪತ್ತು, ಐಶ್ವರ್ಯ ಹಾಗೂ ಸಮೃದ್ಧಿಯನ್ನು ಕರುಣಿಸೆಂದು ಭಕ್ತಿಯಿಂದ ಬೇಡಿಕೊಳ್ಳುತ್ತಾರೆ. ದೀಪಾವಳಿಯ ಮಹತ್ವಗಳಲ್ಲಿ ಇದು ಒಂದು. ನರಕಾಸುರನ ಅಂತ್ಯ ನರಕ ಚತುರ್ದಶಿಯಂದು ಶ್ರೀ ಕೃಷ್ಣನು ನರಕಾಸುರನನ್ನು ಸಂಹರಿಸಿದ ದಿನ. ಇದು ಕೆಟ್ಟದರ ಮೇಲೆ ಒಳ್ಳೆಯ ವಿಜಯವನ್ನು ಸಂಕೇತಿಸುತ್ತದೆ.

ಬಲಿಪಾಡ್ಯಮಿ ದಾನ ಶೂರ ಬಲಿ ಚಕ್ರವರ್ತಿ ಬೇಡಿದವರಿಗೆ ಬೇಡಿದ್ದನ್ನು ನೀಡುತ್ತಿದ್ದ. ಆದರೆ ದಾನವನ್ನು ಸಹ ಯೋಗ್ಯರಿಗೆ ಮಾಡಬೇಕು. ಅಯೋಗ್ಯರಿಗೆ ದಾನವನ್ನು ಮಾಡಬಾರದು. ಇದರಿಂದ ಶ್ರೀ ವಿಷ್ಣು ವಾಮನಾವತಾರ ತಾಳಿ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತಳ್ಳಿದ ದಿನ. ಇದು ಸಹ ದೀಪಾವಳಿಯ ವಿಶೇಷತೆ.


ಹೊಸ ಆರಂಭ ದೀಪಾವಳಿಯು ಹೊಸ ಆರಂಭದ ಸಂಕೇತವಾಗಿದೆ. ಈ ಮಂಗಳಕರ ದಿನ ಹೊಸ ವ್ಯವಹಾರಗಳನ್ನು ಜನರು ಪ್ರಾರಂಭ ಮಾಡುತ್ತಾರೆ. ದೀಪಾವಳಿಯಂದು ಹೊಸ ವ್ಯವಹಾರ ಹಾಗೂ ವ್ಯಾಪಾರಗಳನ್ನು ಪ್ರಾರಂಭ ಮಾಡುವುದರಿಂದ ಜನರು ಯಶಸ್ಸನ್ನು ಕಾಣುತ್ತಾರೆ.

ಹೀಗೆ ದೀಪಾವಳಿಯು ಅನೇಕ ವಿಶೇಷತೆಗಳಿಂದ ಕೂಡಿದೆ. ದೀಪಾವಳಿಯು ಕತ್ತಲೆಯ ಮೇಲೆ ಬೆಳಕಿನ ವಿಜಯ, ಅಜ್ಞಾನದ ಮೇಲೆ ಜ್ಞಾನದ ವಿಜಯ, ಕೆಟ್ಟದರ ಮೇಲೆ ಒಳ್ಳೆಯದರ ವಿಜಯವನ್ನು ಸಂಕೇತಿಸುತ್ತದೆ. ಜನ ತಮ್ಮ ಕಷ್ಟ ತೊಂದರೆಗಳನ್ನು ಮರೆತು ಈ ನಾಲ್ಕೈದು ದಿನಗಳಂದು ಬಡಬಗ್ಗರಾದಿಯಾಗಿ ಸಂತೋಷದಿಂದ ಹಬ್ಬವನ್ನು ಆಚರಿಸುತ್ತಾರೆ. ಈ ದಿನಗಳಲ್ಲಿ ರೈತರಿಗೆ ಹೊಲಗದ್ದೆಗಳ ಕೆಲಸಗಳಲ್ಲಿಯೂ ಸ್ವಲ್ಪ ವಿಶ್ರಾಂತಿ ಸಿಗುತ್ತದೆ. ಮುಂದಿನ ಸುಗ್ಗಿಗೆ ಅವರು ಅಣಿಯಾಗಲು ಈ ದೀಪಾವಳಿ ಅನುಕೂಲ ಮಾಡಿಕೊಡುತ್ತದೆ. ಈ ಹಬ್ಬ ಹರಿದಿನಗಳು ಬಂದು ಮನುಷ್ಯನ ಬೇಸರ, ಒಂಟಿತನ, ಆಲಸ್ಯವನ್ನು ತೊಲಗಿಸಿ ನವ ಚೈತನ್ಯವನ್ನು ತುಂಬುತ್ತವೆ. ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು.

**- ಪ್ರೊ. ಸಿದ್ದು ಸಾವಳಸಂಗ,** ತಾಜಪುರ

## ಕನ್ನಡ ಕವನಗಳು
★★★★★★

### ಇಷ್ಟೇ ಕಣೊ



ಕೆಲವರು
ಬಳಗಗಳಲ್ಲಿ
ಪ್ರೀತಿಯಿಂದ
ಬರೆದು
ಬಳಗವನ್ನು
ಬೆಳೆಸುವವರು!
ಹಲವರು
ಓದಿ
ಪ್ರೋತ್ಸಾಹಿಸುವವರು!!
ಇನ್ನೂ ಹಲವರು
ಇದ್ದರೂ ಇಲ್ಲದಂತೆ
ಇರುವವರು!!!
ಇವರ ನಡುವೆ
ತಮ್ಮದೇ ಮಾತಿಗೆ
ಮನ್ನಣೆ ಸಿಗಲಿಲ್ಲವೆಂದು
ಕಾಣೆಯಾದವರು
ಹಲವರು!
ಇವುಗಳೆಲ್ಲದರ ನಡುವೆ
ಪ್ರಾಣಯಾಮ ಮಾಡಿಕೊಂಡು
ಸಾಹಿತ್ಯ ಕಲಿಯುವವರಿಗೆ
ಬಳಗಗಳ ರಚಿಸಿ
ಕುಳಿತಿರುವ ಅಡ್ಮಿನ್
ಮಹಾಶಯರು !!!!

**- ಹಾ ಮ ಸತೀಶ** ಬೆಂಗಳೂರು

## ದಾರಿ ತಪ್ಪಿಸಿಕೊಂಡಾಗಲೆಲ್ಲ ನನಗೆ ನೆನಪಾಗೋದು ಒಮಾನಿನ ಆ ಆಮೆ!

**» ಅದನ್ನು ನೋಡಿದ ನಂತರ ಆಮೆಗಳ ಅದ್ಭುತ ಲೋಕವೇ ನನ್ನ ಮುಂದೆ ತೆರೆದುಕೊಂಡಿತು. ಅಲ್ಲಿಯವರೆಗೂ ನನಗೆ ಆಮೆಗಳ ಬಗ್ಗೆ ಅಂಥ ಆಸಕ್ತಿಯಾಗಲಿ, ಕುತೂಹಲವಾಗಲಿ ಇರಲಿಲ್ಲ. ಅದು ಎಂದೂ ನನ್ನ ಕಲ್ಪನೆಯ ಚಕ್ರತೀರ್ಥದಲ್ಲಿಟ್ಟು ತಿರುಗಿಸಿರಲಿಲ್ಲ. ನಾನು ಎಂದೂ ಐದು-ಹತ್ತು ನಿಮಿಷ ಕೂಡ ಆ ನಿರುಪದ್ರವಿ ಪ್ರಾಣಿ ಬಗ್ಗೆ ಯೋಚಿಸಿರಲಿಲ್ಲ.**

ನೂರೆಂಟು ವಿಶ್ವ

ಕೆಲ ದಿನಗಳ ಹಿಂದೆ ಬೆಂಗಳೂರಿನಲ್ಲಿ ನನ್ನ ಆಪ್ತ ಸ್ನೇಹಿತರ ಮನೆಗೆ ಹೋಗಬೇಕಿತ್ತು. ನನ್ನ ಡ್ರೈವರ್‌ಗೆ ಅವರ ಮನೆ ಗೊತ್ತಿತ್ತು. ಅಲ್ಲಿಗೆ ಹೋಗಬೇಕೆಂದಾಗ, ಆತ ನೇರವಾಗಿ ಅವರ ಮನೆ ಮುಂದೆ ಕರೆದುಕೊಂಡು ಹೋಗಿ ನಿಲ್ಲಿಸುತ್ತಿದ್ದ. ಅಂದು ಭಾನುವಾರ, ಡ್ರೈವರ್‌ಗೆ ರಜಾ. ನಾನು ಅಲ್ಲಿಗೆ ಹೋಗಲೇಬೇಕಾದ ಕೆಲಸ ಬಂತು. ಅವರ ಮನೆಗೆ ನಾನೇ ಡ್ರೈವ್ ಮಾಡಿಕೊಂಡು ಹೊರಟೆ. ಸಾಯಂಕಾಲ ಆರು ಗಂಟೆಗೆ ಬರುತ್ತೇನೆಂದು ಹೇಳಿದ್ದೆ. ಆ ಸ್ನೇಹಿತರು ಸಮಯದ ವಿಷಯದಲ್ಲಿ ಯಮನ ಅಪ್ಪ!

ಸ್ನೇಹಿತರ ಮನೆಯ ಹತ್ತಿರ ಬಂದು ಅಕ್ಕ-ಪಕ್ಕದ ಬೀದಿಯಲ್ಲೇ ಸುತ್ತಾಡಿದೆ. ಮನೆ ಸಿಗುತ್ತಿಲ್ಲ. ಸ್ನೇಹಿತರ ಸೆಕ್ರೆಟರಿಗೆ ಫೋನ್ ಮಾಡಿದೆ. ಆಕೆ ಹೇಳಿದಳು. ಮೆಟ್ರೋ ಲೈನ್ ಕ್ರಾಸ್ ಮಾಡಿದರೆ, ನಲವತ್ತನೇ ಕ್ರಾಸ್ ಬರುತ್ತದೆ. ಅಲ್ಲಿಯೇ ಆರ್‌ವಿ ಸ್ಟೇಶನ್ ಸಿಗುತ್ತದೆ. ಆನಂತರ ಎಂಟನೇ ಮೇನ್ ನಲ್ಲಿ ಥರ್ಡ್ ರೈಟ್ ತಗೊಳ್ಳಿ. ಸುಮಾರು ಮುನ್ನೂರು ಮೀಟರ್ ಹೋದರೆ ನಲವತ್ನಾಲ್ಕನೆ ಕ್ರಾಸ್‌ನಲ್ಲಿ ಐದನೇ ಲೆಫ್ಟ್ ತಗೊಂಡ್ರೆ ಎಡಕ್ಕೆ ಆರನೇ ಮನೆ. ಮನೆ ಮುಂದೆ ಮೂರು-ನಾಲ್ಕು ಕಾರು ನಿಂತಿರುತ್ತವೆ. ಸೆಕ್ಯುರಿಟಿ ಇರ್ತಾನೆ ನಿಮಗೆ ಸುಲಭವಾಗಿ ಗೊತ್ತಾಗುತ್ತೆ.

ಆಕೆ ಹೇಳಿದ್ದು ನಿಮಗೇನಾದರೂ ಅರ್ಥವಾಯಿತಾ? ನನಗೆ ತಲೆಕೆಟ್ಟು ಹೋಯಿತು. ಇನ್ನೊಂದು ಸಲ ಹೇಳಿ ಅಂದೆ. ಆಕೆ ಎರಡೆರಡು ಸಲ ಹೇಳಿದಳು. ನನಗೆ ಮತ್ತಷ್ಟು ಗೊಂದಲವಾಯಿತು. ಮೇಡಂ, ಏನಾದರೂ ಲ್ಯಾಂಡ್ ಮಾರ್ಕ್ ಗೊತ್ತಿದ್ದರೆ ಹೇಳಿ ಎಂದೆ. ಎಂಟನೇ ಮೇನ್‌ನಲ್ಲಿ ಥರ್ಡ್ ರೈಟ್ ತಗೋತೀರಲ್ಲ, ಅದಕ್ಕಿಂತ ಮೊದಲು ಟು ಎ ಕ್ರಾಸ್ ರೋಡ್ ಸಿಗುತ್ತಲ್ಲ, ಅಲ್ಲಿ ಒಂದು ರೋಡ್ ಹಂಪ್ ಇದೆ. ಅಲ್ಲಿಂದ ಹತ್ತು ಮೀಟರ್‌ನಲ್ಲಿ ವಾಟರ್ ಪೈಪ್‌ಗಾಗಿ ರಸ್ತೆ ಅಗೆದಿದ್ದಾರೆ.

ಆನಂತರ ಇಪ್ಪತ್ತು ಮೀಟರ್ ಹೋದರೆ ಥರ್ಡ್ ರೈಟ್ ತಗೋವಾಗ ಪಕ್ಕದಲ್ಲಿ ಶಿವಶಕ್ತಿ ಮಿಲ್ಕ್ ಬೂತ್ ಇದೆ. ಆದರೆ ಶಿವಶಕ್ತಿ ಎಂದು ಬರೆದಿರುವುದು ಅಳಿಸಿ ಹೋಗಿದೆ. ಹಾಗೇ ಅಲ್ಲಿ ಕೇಳಿ, ನಮ್ಮ ಬಾಸ್ ಹೆಸರು ಹೇಳಿ, ಹೇಳ್ತಾರೆ ಅಂದಳು. ತಲೆ ಧಿಮ್ಮೆಂದಿತು.

ನಾನು ಎಲ್ಲಿದ್ದೇನೆ ಎಂಬುದನ್ನು ಅವಳಿಗೆ ಹೇಳಿಲ್ಲ, ಅವಳೂ ಕೇಳಲಿಲ್ಲ. ಪುನಃ ಫೋನ್ ಮಾಡಿದೆ. ಮೇಡಂ, ನಾನು ಈಗ ಆರನೇ ಮೇನ್ ಮೂವತ್ತೊಂದನೇ ಬಿ ಕ್ರಾಸ್‌ನಲ್ಲಿ ಇದ್ದೇನೆ. ಇಲ್ಲಿಂದ ಮುಂದೆ ಹೇಗೆ ಹೋಗಬೇಕು ಎಂದು ಕೇಳಿದೆ. ಆಕೆ ಓ ಅಲ್ಲಿದ್ದಿರಾ? ಈಗ ಹೇಳ್ತೀನಿ ಕೇಳಿ, ಆರನೇ ಮೇನ್‌ನಲ್ಲಿ ಹಾಗೇ ಸ್ವಲ್ಪ ಹಿಂದಕ್ಕೆ ಬಂದರೆ ಒಂದು ಸರ್ವೀಸ್ ರೋಡ್ ಸಿಗುತ್ತದೆ.

ಅದೇ ರೋಡ್‌ನಲ್ಲಿ ಇನ್ನೂರು ಮೀಟರ್ ಹೋದರೆ ಎಂಟನೇ ಮೇನ್ ಸಿಗುತ್ತದೆ. ಅಲ್ಲಿ ಆರ್‌ವಿ ಸ್ಟೇಶನ್‌ನಿಂದ ಬಂದ ರೋಡ್ ಕನೆಕ್ಟ್ ಆಗುತ್ತೆ. ಸ್ವಲ್ಪ ಮುಂದೆ ಬಂದ್ರೆ ಜಯನಗರ ಆಟದ ಮೈದಾನದಿಂದ ಬಂದ ರಸ್ತೆಯಲ್ಲಿ ಕೂಡುತ್ತೆ. ಅದು ಇಪ್ಪತ್ತೊಂಬತ್ತನೇ ಕ್ರಾಸ್ ರೋಡ್. ಅಲ್ಲೊಂದು ಪೆಟ್ಟಿಗೆ ಅಂಗಡಿ ಇದೆ. ಅದರ ಎಡಕ್ಕೆ ತಿರುಗಿ ಸೀದಾ ಹೋಗಿ ಎಂದಳು. ನಾನೇನಾದರೂ ಚಕ್ರವ್ಯೂಹದೊಳಗೆ ಹೋಗುತ್ತಿದ್ದೆನಾ ಎಂದೆನಿಸಿತು.

ಒಂದು ನಿಮಿಷ ಕಾರು ನಿಲ್ಲಿಸಿಕೊಂಡೆ. ಅವಳು ಹೇಳಿದಂತೆ ಹೋಗಲು ಸಾಧ್ಯವೇ ಇರಲಿಲ್ಲ. ತಲೆ ಚಿಟ್ಟು ಹಿಡಿದು ಹೋಗುವಂತೆ ವಿವರಿಸಿದ್ದಳು. ಮೇಡಂ, ಒಂದು ಕೆಲಸ ಮಾಡಿ, ಅವರ ಮನೆಯ ಲೊಕೇಶನ್ ವಾಟ್ಸಾಪ್ ಮಾಡಲು ಸಾಧ್ಯವಾ? ಎಂದು ಕೇಳಿದೆ. ನನ್ನ ಬಳಿ ಇಲ್ಲ, ನಾನು ಅವರ ಮನೆಯಲ್ಲಿ ನಿಂತು ಕಳಿಸಬಹುದು. ಆದರೆ ಈಗ ನಾನು ಪುಟ್ಟಪರ್ತಿಯಲ್ಲಿದ್ದೇನೆ ಎಂದು ಅಸಹಾಯಕತೆ ತೋಡಿಕೊಂಡಳು.

ಅಷ್ಟಕ್ಕೇ ಸುಮ್ಮನಾಗದ ಆಕೆ, ಒಂದು ಕೆಲಸ ಮಾಡಿ, ನೀವು ಅವರ ಮನೆಯಿಂದ ಕೇವಲ ಮುನ್ನೂರೋ-ನಾನೂರೋ ಮೀಟರ್ ದೂರದಲ್ಲಿದ್ದೀರಿ. ನಾನು ಮತ್ತೊಮ್ಮೆ ನಿಮಗೆ ಡೈರೆಕ್ಷನ್ ವಿವರಿಸುತ್ತೇನೆ, ಆಗಬಹುದಾ? ಎಂದು ಕೇಳಿದಳು.

ಅದಕ್ಕೆ ನಾನು ಬೇಡ, ಬೇಡ... ನಿಮ್ಮ ಬಾಸ್‌ಗೇ ಫೋನ್ ಮಾಡಿ ಲೊಕೇಶನ್ ತೆಗೆದುಕೊಳ್ಳುತ್ತೇನೆ. ತೊಂದರೆ ಇಲ್ಲ, ಥ್ಯಾಂಕ್ಸ್ ಎಂದೆ. ಅಷ್ಟೊತ್ತಿಗೆ ಇಪ್ಪತ್ತು ನಿಮಿಷ ಕಳೆದುಹೋಗಿತ್ತು. ನಾನು ನನ್ನ ಸ್ನೇಹಿತರಿಗೆ ಫೋನ್ ಮಾಡಿದೆ. ಅವರು ಅರ್ಧ ಗಂಟೆಯಿಂದ ಕಾಯುತ್ತಿದ್ದರು. ವಾಟ್ಸಾಪ್ ಮೂಲಕ ಲೊಕೇಶನ್ ಕಳಿಸುವಂತೆ ಹೇಳಿದೆ. ಅವರು ಕಳಿಸಿದರು.

ಆದರೂ ಒಂದು ತಿರುವಿನಲ್ಲಿ ಯಡವಟ್ಟಾಯಿತು. ಕೊನೆಗೂ ಅವರ ಮನೆ ತಲುಪಿದೆ. ಹಾಗಂತ ನಾನು ಅವರ ಮನೆಗೆ ಹೋಗಿದ್ದು ಅದೇ ಮೊದಲ ಸಲ ಆಗಿರಲಿಲ್ಲ. ನಾಲ್ಕೈದು ಸಲ ಹೋಗಿದ್ದೆ. ಆದರೆ ಈ ಬಾರಿ ಡ್ರೈವರ್ ಇಲ್ಲದ್ದರಿಂದ ಸ್ವಲ್ಪ ತೊಂದರೆಯಾಯಿತು. ಆದರೂ ಬೆಂಗಳೂರಿನಲ್ಲಿ ವಿಳಾಸ ಪತ್ತೆ ಹಚ್ಚುವುದು ಕಷ್ಟವೇ. ಈಗ ಜಿಪಿಎಸ್ ಬಂದ ನಂತರ ಸುಲಭವಾಗಿದೆ. ಜಿಪಿಎಸ್ ಬರುವುದಕ್ಕಿಂತ ಮೊದಲು ಜನ ಹೇಗೆ ವಿಳಾಸ ಪತ್ತೆ ಹಚ್ಚುತ್ತಿದ್ದರು ಎಂಬುದು ಈಗಿನ ಮಕ್ಕಳಿಗೆ ವಿವರಿಸಿದರೆ ಅರ್ಥವಾಗುವುದು ಕಷ್ಟವೇ.

ಈಗ ಯಾರೂ ವಿಳಾಸ ಕೇಳುವುದಿಲ್ಲ. ಮೊಬೈಲ್ ಜಿಪಿಎಸ್ ಆನ್ ಮಾಡಿಕೊಂಡು ಜಯನಗರವೇನು, ಜಗತ್ತನ್ನೇ ಸುತ್ತಿ ಜಯಶಾಲಿಯಾಗುತ್ತಾರೆ. ಆದರೂ ಕೆಲವು ಸಲ ಪಕ್ಕದ ಓಣಿಯಲ್ಲಿನ ವಿಳಾಸ ಗೊತ್ತಾಗದೇ ತಿರುಗಿದಲ್ಲಿಯೇ ಗಿರಕಿ ಹೊಡೆದು ಸುಸ್ತಾಗುತ್ತೇವೆ.

ಕೆಲ ವರ್ಷದ ಹಿಂದೆ, ದುಬೈಯಿಂದ ಒಮಾನ್‌ಗೆ ಹೋಗಿ ಇಡೀ ದೇಶ ಸುತ್ತಿ ಬಂದಾಗ, ಕಾರಿನ ಕಿಟಕಿಯಿಂದ ಕತ್ತನ್ನು ಹೊರ ಹಾಕಿ ಒಂದು ಸಲವೂ ವಿಳಾಸ ಕೇಳಲಿಲ್ಲ. ಆ ದೇಶದ ಉದ್ದಗಲಕ್ಕೆ ಐದಾರು ಸಾವಿರ ಕಿಮೀ ದೂರ ಕ್ರಮಿಸಿದರೂ ಒಂದು ಸಲವೂ ದಾರಿ ಕೇಳುವ ಪ್ರಸಂಗವೇ ಬರಲಿಲ್ಲ. ಅದೇ ಮೊನ್ನೆ ಮಲ್ಲತ್ತಳ್ಳಿಯಲ್ಲಿರುವ ನನ್ನ ಸ್ನೇಹಿತರ ಮನೆ ಹುಡುಕಲು ಆಗದೇ ವಾಪಸ್ ಬರಬೇಕಾಯಿತು. ಕಾರಣ ಮೊಬೈಲ್ ನೆಟ್ ವರ್ಕ್ ಡೌನ್ ಆಗಿ ಜಿಪಿಎಸ್ ಕೆಲಸ ಮಾಡುತ್ತಿರಲಿಲ್ಲ.

ಅಂದರೆ ಇಂದು ಜಿಪಿಎಸ್ ಇದ್ದರೆ ಯಾರ ಸಹಾಯವಿಲ್ಲದೇ ಸುತ್ತಿ ಬರಬಹುದು. ಅದೇ ಜಿಪಿಎಸ್ ಡೌನ್ ಆದರೆ, ಮೊಬೈಲ್‌ನಲ್ಲಿ ಬ್ಯಾಟರಿ ಪವರ್ ಪೂರ್ತಿ ಕರಗಿ ಹೋದರೆ, ಪಕ್ಕದ ಬೀದಿಯಲ್ಲಿನ ವಿಳಾಸ ಹುಡುಕುವುದೂ ಕಷ್ಟ. ಅಂದರೆ ಜಿಪಿಎಸ್ ಇದ್ದರೆ ಮಾತ್ರ ನಮ್ಮ ಪೊಗರು. ಇಲ್ಲದಿದ್ದರೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಂತೆ.

ನಾನು ಹೀಗೆಲ್ಲ ಯೋಚನೆ ಮಾಡುವಾಗ ನನಗೆ ನೆನಪಾಗಿದ್ದು ಒಮಾನ್ ಕಡಲ ತೀರದಲ್ಲಿ ಕಂಡ ಆಮೆಗಳು! ನಾನು ಒಮಾನ್‌ನಿಂದ ಬಂದ ನಂತರ, ಆಮೆಗಳ ಬಗ್ಗೆ ಮೂವತ್ತೊಂದು ವರ್ಷಗಳ ಕಾಲ ಸಂಶೋಧನೆ ಮಾಡಿದ, ನ್ಯಾಶನಲ್ ಜಿಯಾಗ್ರಫಿಕ್ ಪತ್ರಿಕೆ ಹಾಗೂ ಚಾನೆಲ್‌ನಲ್ಲಿ ಹಿರಿಯ ಸಂಪಾದಕನಾಗಿರುವ ರಿಚರ್ಡ್ ಹರ್ಷೆ ಎಂಬಾತ ಬರೆದ ಪುಸ್ತಕಗಳನ್ನು ಓದಿದೆ. ಆತನೇ ನಿರ್ಮಿಸಿದ, ನಿರ್ದೇಶಿಸಿದ ಸಾಕ್ಷ್ಯ ಚಿತ್ರಗಳನ್ನು ವೀಕ್ಷಿಸಿದೆ.

ಅದನ್ನು ನೋಡಿದ ನಂತರ ಆಮೆಗಳ ಅದ್ಭುತ ಲೋಕವೇ ನನ್ನ ಮುಂದೆ ತೆರೆದುಕೊಂಡಿತು. ಅಲ್ಲಿಯವರೆಗೂ ನನಗೆ ಆಮೆಗಳ ಬಗ್ಗೆ ಅಂಥ ಆಸಕ್ತಿಯಾಗಲಿ, ಕುತೂಹಲವಾಗಲಿ ಇರಲಿಲ್ಲ. ಅದು ಎಂದೂ ನನ್ನ ಕಲ್ಪನೆಯ ಚಕ್ರತೀರ್ಥದಲ್ಲಿಟ್ಟು ತಿರುಗಿಸಿರಲಿಲ್ಲ. ನಾನು ಎಂದೂ ಐದು-ಹತ್ತು ನಿಮಿಷ ಕೂಡ ಆ ನಿರುಪದ್ರವಿ ಪ್ರಾಣಿ ಬಗ್ಗೆ ಯೋಚಿಸಿರಲಿಲ್ಲ. ಆಮೆಗಳು ಮೊಟ್ಟೆ ಇಡುವುದನ್ನು ನೋಡಲೆಂದು ಒಮಾನ್ ಬೀಚಿನಲ್ಲಿ ಬೆಳಗಿನ ಜಾವಕ್ಕೆ ಹೋದಾಗ, ಕಡಲಿನಿಂದ ಸಮುದ್ರ ತೀರಕ್ಕೆ ಏದುಸಿರು ಬಿಡುತ್ತಾ ತೆವಳಿಕೊಂಡು ಆಮೆಗಳು ಬರುತ್ತಿದ್ದವು. ಅವೆಲ್ಲವೂ ಗರ್ಭಿಣಿ ಆಮೆಗಳು! ಮೊಟ್ಟೆಯಿಡಲು ಅಲ್ಲಿಗೆ, ಅಂದರೆ ತವರು ಮನೆಗೆ ಆಗಮಿಸುತ್ತಿದ್ದವು! ಹಾಗಂತ ಒಮಾನ್‌ನಲ್ಲಿ ಸಾವಿರಾರು ಕಿಮೀ ಉದ್ದದ ಸಮುದ್ರ ಕಿನಾರೆಯಿದೆ. ಆದರೆ ಅವೆಲ್ಲ ಬಿಟ್ಟು ಆ ಕಡಲಾಮೆಗಳು ಅದೊಂದೇ ಜಾಗಕ್ಕೆ ಮೊಟ್ಟೆಯಿಡಲು ಬರುತ್ತವೆ. ಆ ಸಮುದ್ರ ತಟದಲ್ಲಿ ಅದೆಂಥ ಮಹಿಮೆಯಿದೆಯೋ ನಾ ಕಾಣೆ.

ತವರು ಮನೆಯೆಂಬುದು ಕೊಳಗೇರಿಯಲ್ಲಿರಲಿ, ಐಷಾರಾಮಿ ಪ್ರದೇಶದಲ್ಲಿ ಇರಲಿ, ಎಲ್ಲಿಯೇ ಇರಲಿ, ಅದು ತವರುಮನೆಯೇ. ಅದು ಹೇಗಿದ್ದರೂ ತವರುಮನೆಯೇ. ಅಲ್ಲಿ ಸಿಗುವಂಥ ಮುಕ್ತ ವಾತಾವರಣ, ಆಪ್ತ ಪರಿಸರ ಮತ್ತೆಲ್ಲೂ ಸಾಧ್ಯವಿಲ್ಲ. ಹೀಗಾಗಿ ಆ ಕಡಲಾಮೆಗಳೆಲ್ಲ ಅಲ್ಲಿಗೇ ಬರುತ್ತವೆ.


ಅಂದು ಹತ್ತಾರು ಆಮೆಗಳು ಬಂದು ಎರಡು ಅಡಿ ಆಳದ ಹೊಂಡ ತೋಡಿ, ತನ್ನ ರೆಕ್ಕೆಗಳಿಂದ ಉಸುಕನ್ನೆಲ್ಲ ಮೈಮೇಲೆ ಹಾಕಿಕೊಂಡು, ತನ್ನನ್ನೇ ಹೂತು ಹಾಕಿಕೊಂಡಿತು. ಕ್ಷಣಾರ್ಧದಲ್ಲಿ ಆಮೆಗಳೇ ಮಾಯ! ಸುಮಾರು ಅರ್ಧ-ಮುಕ್ಕಾಲು ಗಂಟೆ ಅರವತ್ತು-ಎಪ್ಪತ್ತು ಮೊಟ್ಟೆಗಳನ್ನು ಆ ಮರಳಿನ ಹೊಂಡದಲ್ಲಿಯೇ ಇಟ್ಟು, ಮೇಲಿಂದ ಮರಳು ಮುಚ್ಚಿ ಸಪಾಟು ಮಾಡಿ, ಅಲ್ಲಿಂದ ಎದ್ದು ನಿಧಾನವಾಗಿ ತೆವಳುತ್ತಾ ಪುನಃ ಕಡಲಿಗೆ ಇಳಿದು ಅದೃಶ್ಯವಾಯಿತು. ಅದು ಆನಂತರ ಎಲ್ಲಿಗೆ ಹೋಯಿತೋ, ಅದಕ್ಕೆಂಥ ತುರ್ತು ಕೆಲಸವೋ ಗೊತ್ತಿಲ್ಲ.



ಇದಾಗಿ ಸುಮಾರು ಮೂವತ್ತೈದು ದಿನಗಳ ನಂತರ ಅದೇ ಕಡಲಾಮೆ ಪುನಃ ಅದೇ ಬೀಚ್‌ಗೆ ಬರುತ್ತದೆ. ಆ ಬೀಚ್‌ನಲ್ಲಿ ಆಗಲೇ ಮುನ್ನೂರು-ನಾನೂರು ಆಮೆಗಳು ಮೊಟ್ಟೆ ಇಟ್ಟಿರುತ್ತವೆ. ಆದರೆ ಆ ಆಮೆಗೆ ತಾನು ಮೊಟ್ಟೆ ಇಟ್ಟಿದು ಎಲ್ಲಿ ಎಂಬುದು ಹೇಗೆ ಗೊತ್ತಾಗುವುದೋ ಆ ಭಗವಂತನೇ ಬಲ್ಲ!

ಅದು ಯಾರನ್ನೂ ಕೇಳದೇ, ಜಿಪಿಎಸ್ ಬಳಸದೇ ಒಂದು ನಿರ್ದಿಷ್ಟ ಜಾಗಕ್ಕೆ ಬಂದು ಕೆದರಿದರೆ, ಅದು ಆ ಆಮೆ ಮೊಟ್ಟೆ ಇಟ್ಟ ಜಾಗವೇ ಆಗಿರುತ್ತದೆ. ಅದೆಂಥ ವಿಸ್ಮಯವೋ ಗೊತ್ತಿಲ್ಲ. ಸರಿ, ಆಮೆ ಪುನಃ ಆ ಜಾಗವನ್ನು ಕಾಲಿಂದ ಕೆದರಿ ಎರಡು ಅಡಿ ಹೊಂಡ ಮಾಡಿ, ತನ್ನ ಮೇಲೆ ಉಸುಕು ಸುರುವಿಕೊಂಡು ಅದರೊಳಗೆ ಅವಿತು, ತಾನು ಇಟ್ಟ ಮೊಟ್ಟೆಗಳ ಮೇಲೆ ಕುಳಿತುಕೊಂಡು ಕಾವು ಕೊಡುತ್ತದೆ. ಒಂದೊಂದೇ ಮರಿಗಳು ಹೊರಬರುತ್ತವೆ.

ಬೆಂಕಿಪೊಟ್ಟಣದಷ್ಟು ಗಾತ್ರದ ಆ ಮರಿಗಳು ಆಗಷ್ಟೇ ಕಣ್ಣು ಬಿಟ್ಟು ಜಗತ್ತಿಗೆ ಬಂದಿವೆ. ಸಮುದ್ರದ ಅಲೆಗಳು ಬರುತ್ತಿರುವಂತೆ, ತೆವಳುತ್ತಾ ತೆವಳುತ್ತಾ ನೀರಿನೊಳಗಿಳಿದು ನಾಪತ್ತೆಯಾಗಿ ಬಿಡುತ್ತವೆ. ಹಾಗೆಂದು ಆಮೆಗಳ ಜತೆಗೆ ತಾಯಿ ಆಮೆ ಸಹ ಇರುವುದಿಲ್ಲ. ಹತ್ತು ಹದಿನೈದು ನಿಮಿಷಗಳ ಹಿಂದೆ, ಹುಟ್ಟಿದ ಆಮೆ ಮರಿ ತನ್ನ ಪಾಡಿಗೆ ತಾನು ಸುಮ್ಮನೆ ಸಾಗರಕ್ಕಿಳಿದು ಈಜುತ್ತಾ ಅದೆಲ್ಲಿಗೋ ಹೋಗಿ ಬಿಡುತ್ತದೆ. ತಾಯಿಯಿಲ್ಲ, ಸಂಗಡಿಗರಿಲ್ಲ, ಸಂಗಾತಿಯಲ್ಲ. ಬರೀ ಏಕಾಂಗಿಯಾಗಿ ಆ ಹಸಿಹಸಿ ಹಸುಳೆ ಆಮೆ ಕಂದ ಸಾಗರವೆಂಬ ಪ್ರಚಂಡ ಲೋಕ ಸೇರಿಬಿಡುತ್ತದೆ. ಅದು ಮುಂದೆ ಎಲ್ಲಿಗೆ ಹೋಗುತ್ತದೋ, ಏನು ಮಾಡುತ್ತದೋ, ಎಂಥ ಕತೆಯೋ ಯಾರಿಗೂ ಗೊತ್ತಿಲ್ಲ. ಹಾಗೆ ಈಜುತ್ತಾ ಈಜುತ್ತಾ ಆ ಆಮೆ ಹಿಂದೂ ಮಹಾಸಾಗರ, ಅಟ್ಲಾಂಟಿಕ್ ಸಾಗರ, ಮೆಡಿಟರೇನಿಯನ್ ಸಮುದ್ರ, ಕಪ್ಪು ಸಮುದ್ರ, ಕೆಂಪು ಸಮುದ್ರ, ಕ್ಯಾಸ್ಪಿಯನ್ ಸಮುದ್ರ, ಪರ್ಶಿಯನ್ ಗಲ್, ಎಡ್ರಿಯಾಟಿಕ್ ಸಮುದ್ರ, ಕೆರಿಬಿಯನ್ ಸಮುದ್ರ, ಬಾಲ್ಟಿಕ್ ಸಮುದ್ರ, ಜಾವಾ ಸಮುದ್ರ, ಲಿಯೋನಿಕ್ ಸಮುದ್ರ, ತಿಮೋರ್ ಸಮುದ್ರ, ಫಿಲಿಪ್ಪೀನ್ಸ್ ಸಮುದ್ರ, ಹಳದಿ ಸಮುದ್ರ, ಪೂರ್ವ ಚೀನಾ ಸಮುದ್ರ, ಅಂಡಮಾನ್ ಸಮುದ್ರ, ಬಂಗಾಳಕೊಲ್ಲಿ, ಮರ್ಮರ ಸಮುದ್ರ, ಸೆಲ್ಟಿಕ್ ಸಮುದ್ರ, ಅಲ್ಬೋರನ್ ಸಮುದ್ರ... ಹೀಗೆ ಎಲ್ಲ ಖಂಡಗಳನ್ನು ಆವರಿಸಿರುವ ಸಮುದ್ರದಲ್ಲಿ ಅಲೆಮಾರಿಯಂತೆ, ಮಹಾ ಪಯಣಿಗನಂತೆ, ರಿಟರ್ನ್ ಟಿಕೆಟ್ ಖರೀದಿಸದ ಪ್ರವಾಸಿಯಂತೆ ತಿರುಗುತ್ತಲೇ ಇರುತ್ತದೆ.



ಈ ಪಯಣದಲ್ಲಿ ಅದು ಹೋಗದ ದೇಶಗಳಿಲ್ಲ, ನೋಡದ ಊರುಗಳಿಲ್ಲ. ಒಂದಲ್ಲ ಎರಡಲ್ಲ, ಸುಮಾರು ನಲವತ್ತು ವರ್ಷಗಳ ಕಾಲ ಸಮುದ್ರದಲ್ಲಿ ಮಹಾ ಪಥಿಕನಂತೆ ಅಲೆಯುತ್ತಲೇ, ಈಜುತ್ತಲೇ ಇರುತ್ತದೆ. ಈ ಮಧ್ಯೆ ಆಫ್ರಿಕಾದಲ್ಲೋ, ಆಸ್ಟ್ರೇಲಿಯಾದಲ್ಲೋ ಸಂಗಾತಿಯನ್ನು ಭೇಟಿಯಾಗಿ ಗರ್ಭಧರಿಸಿದಾಗ, ಮೊಟ್ಟೆಗಳನ್ನಿಡಲು ತಾನು ಹುಟ್ಟಿದ ಒಮಾನ್‌ನ ಅದೇ ಕಡಲ ತೀರವನ್ನು ಹುಡುಕಿಕೊಂಡು ಬರುತ್ತದೆ. ಅದಕ್ಕೆ ಅಂಥ ತವರಿನ ಪಾಶ!

ಗರ್ಭದಲ್ಲಿ 60-70 ಮೊಟ್ಟೆಗಳನ್ನಿಟ್ಟುಕೊಂಡು ಆಫ್ರಿಕಾದ ಅಥವಾ ಆಸ್ಟ್ರೇಲಿಯಾದ ಕಡಲ ತೀರದಲ್ಲಿ ಅವುಗಳನ್ನು (ಮೊಟ್ಟೆಗಳನ್ನು) ಇಡಬಹುದಿತ್ತು. ನಲವತ್ತು ವರ್ಷಗಳ ಹಿಂದೆ ತಾನು ಹುಟ್ಟಿದ ಆ ಕಡಲ ಕಿನಾರೆಯನ್ನೇ ಹುಡುಕಿಕೊಂಡು ಬರಬೇಕಾದ ದರ್ದಾದರೂ ಏನಿತ್ತು? ಹತ್ತಾರು ಸಾವಿರ ಕಿಮೀ ದೂರವನ್ನು ಕ್ರಮಿಸಿಕೊಂಡಾದರೂ ಸೈ, ಒಮಾನ್‌ನ ಕಡಲಲ್ಲಿರುವ ತನ್ನ ತವರಿನಲ್ಲೇ ಮೊಟ್ಟೆಯಿಡುವ ತವಕ. ಅಷ್ಟಕ್ಕೂ ಅಷ್ಟು ದೂರದಿಂದ ಆ ಆಮೆಯನ್ನು ನಿರ್ದೇಶಿಸಿದ, ಕೈಹಿಡಿದು ಕರೆದುಕೊಂಡು ಬಂದ ಆ ಜಿಪಿಎಸ್ ಯಾವುದು? ಆ ಜಿಪಿಎಸ್ ಅನ್ನು ಡೆವೆಲಪ್ ಮಾಡಿದವರು ಯಾರು? ನನಗಂತೂ ಇದು ಅನುಗಾಲದ ವಿಸ್ಮಯವೇ.

ಉದ್ಯೋಗವನ್ನರಸಿ ಪಟ್ಟಣ, ನಗರವನ್ನು ಸೇರಿ, ನಮ್ಮ ತಾಯಿಬೇರನ್ನೂ ಕಿತ್ತು, ಅದೇ ನಗರಗಳಲ್ಲಿ ನೆಟ್ಟು, ಹುಟ್ಟಿದ ಹಳ್ಳಿಯ ಕಡೆ ತಿರುಗಿಯೂ ನೋಡದ ನಾವೆಲ್ಲಿ, ಹತ್ತಾರು ಸಾವಿರ ಕಿಮೀ ದೂರದಲ್ಲಿದ್ದರೂ, ಖಂಡದಾಚೆಯ ಅಗೋಚರ ನಾಡಿನಲ್ಲಿದ್ದರೂ ಮೊಟ್ಟೆಯನ್ನು ಇಡಲು ತವರಿಗೇ ಬರುವ ಆ ಆಮೆಯ ಕಕ್ಕುಲಾತಿ ಎಲ್ಲಿ? ಅದ್ಯಾವ ಸಂಬಂಧ, ಮಣ್ಣಿನ ವಾಸನೆ, ಹುಟ್ಟೂರಿನ ಮೋಹ, ಕರುಳು ಬಳ್ಳಿಯ ವಾತ್ಸಲ್ಯ, ಜನ್ಮ ನೀಡಿದ ಮಣ್ಣಿನ ಮಮತೆ ಆ ಆಮೆಯನ್ನು ಕೈಹಿಡಿದು ಕೊಂಡು ಅರಸಿ ಬಂದಿರಬಹುದು? ಇದು ಯಾವ ಜಿಪಿಎಸ್‌ಗೂ ನಿಲುಕದ ವಿಸ್ಮಯದ ಆಪ್. ನಗರಗಳಲ್ಲಿ ಒಂದೇ ಅಪಾರ್ಟ್‌ಮೆಂಟ್‌ನಲ್ಲಿದ್ದರೂ ಎದುರಿನ ಫ್ಲ್ಯಾಟ್ ನಲ್ಲಿರುವವರ ಗುರುತು ಇಲ್ಲದೇ ಬದುಕುವ ನಾವು, ಹಿಂದಿನ ಬೀದಿಯಲ್ಲಿರುವ ಜನರ ಮುಖಪರಿಚಯವೇ ಇಲ್ಲದಂತೆ ಜೀವನವಿಡೀ ಬದುಕುವ ನಾವು, ಅನಾಮಧೇಯರಂತೆ ನಮ್ಮ ಬದುಕನ್ನು ಸಾಗಿಸಿ ಬಿಡುತ್ತೇವೆ.

ಹುಟ್ಟಿದೂರಿನ ಎಲ್ಲ ಸಂಬಂಧವನ್ನು ಕಡಿದು ನಮ್ಮದಲ್ಲದ ಊರಿನಲ್ಲಿ ಪರಕೀಯರಂತೆ ಬಾಳುತ್ತೇವೆ. ಆದರೆ ಈ ಆಮೆ ಮಾತ್ರ ಗರ್ಭ ಧರಿಸಿದಾಗಲೆಲ್ಲ ತನ್ನ ಊರನ್ನು ನೆನಪಿಸಿಕೊಳ್ಳುತ್ತದೆ. ಮೊಟ್ಟೆಯನ್ನಿಡುವ ನೆಪದಲ್ಲಾದರೂ ಹುಟ್ಟೂರಿಗೆ ಭೇಟಿ ಕೊಡುತ್ತದೆ. ಜಯನಗರದ ಸ್ನೇಹಿತರ ಮನೆಯ ತಿರುವಿನಲ್ಲಿ ನಿಂತಾಗ ಇವೆಲ್ಲ ನೆನಪಾಯಿತು!

**- ವಿಶ್ವೇಶ್ವರ** ಭಟ್

## ಎತ್ತು ಏರಿಗೆ ಎಳೆದು ಕೋಣ ನೀರಿಗೆ ಎಳೆದರೆ

1997 ರ ನಂತರ 2024ರಲ್ಲಿ ನಾನು ಬೋಧನೆ ಮಾಡಿದೆ. ಸಿ ಬಿ ಎಸ್ ಸಿ ಯ ಗ್ರೇಡ್ 10 ನನ್ನ ಒಬ್ಬಳು ವಿದ್ಯಾರ್ಥಿನಿ ನನ್ನ ವಿಷಯದಲ್ಲಿ 100 ಕ್ಕೆ 100 ಪಡೆದರೆ 50% ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ಸಾಧಿಸಿದರು. ಆದ್ದರಿಂದ ನನ ತಲುಪುವಿಕೆಯ ಬಗ್ಗೆ ನನಗೆ ವಿಶೇಷ ನಂಬಿಕೆ ಅಷ್ಟೇ. ಏನೇ ಇರಲಿ ವಿಷಯದೊಂದಿಗೆ ಮುಂದುವರಿಸೋಣ.

ನಮಗೆ ಸ್ವಚ್ಛತೆಯ ಬಗ್ಗೆ ಎರಡು ಜಾಹೀರಾತುಗಳು ತೀರಾ ಪರಿಚಿತ. ಒಂದು ಸೋಪಿನಿಂದ ಕೈ ತೊಳೆಯುವುದು ಇನ್ನೊಂದು ನಿಮ್ಮ ಟಾಯ್ಲೆಟ್ ಅನ್ನು ಸ್ವಚ್ಛವಾಗಿಡುವುದು. ಇಲ್ಲಿ ಎರಡೂ ಕ್ರಿಯೆಗಳ ಉದ್ದೇಶ ಒಂದೇ ಆಗಿದ್ದರೂ ಕೂಡಾ ಎರಡೂ ಒಂದೇ ಪ್ರಕ್ರಿಯೆಗಳಲ್ಲ. ಟಾಯ್ಲೆಟ್ ನಲ್ಲಿರುವ ಸೂಕ್ಷ್ಮಾಣು ಜೀವಿಗಳನ್ನು ನಾಶ ಮಾಡುವ ಕ್ರಿಯೆ ಪೂತಿನಾಶಕ ಕ್ರಿಯೆ. ಅದಕ್ಕೆ ಬಳಸುವ ವಸ್ತುಗಳು ಪೂತಿನಾಶಕಗಳು. ಇವು ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತವೆ. ಸಾಬೂನು ಕೂಡಾ ಬ್ಯಾಕ್ಟೀರಿಯಾಗಳನ್ನು ನಿವಾರಿಸುತ್ತದೆ ಅಂದರೆ ಕೊಲ್ಲುತ್ತದೆ. ಆದರೆ ಸಾಬೂನು ಬ್ಯಾಕ್ಟೀರಿಯಾಗಳನ್ನು ಕೊಲ್ಲುವುದಿಲ್ಲ ಬದಲಾಗಿ ನಾಶಪಡಿಸುತ್ತವೆ. ಆದರೆ ಇದು ಪೂತಿನಾಶ ಅಲ್ಲ ಬದಲಾಗಿ ಸ್ವಚ್ಛಗೊಳಿಸುವಿಕೆ. ಎರಡರ ಪರಿಣಾಮ ಒಂದೇ ಆದರೆ ಪ್ರಕ್ರಿಯೆ ಒಂದೇ ಅಲ್ಲ. ನಮ್ಮ ಚರ್ಚೆಯ ವಿಷಯಕ್ಕೆ ಸಾಬೂನು ನಮಗೆ ಹತ್ತಿರವಾಗಿರುವುದರಿಂದ ಇವತ್ತು ನಮ್ಮ ಚರ್ಚೆಯ ವಸ್ತು ಸಾಬೂನು.

ಸಾಬೂನು ಎಂದರೇನು ಎಂಬ ಪ್ರಶ್ನೆಗೆ ಸರಳವಾಗಿ ಉತ್ತರಿಸಬೇಕೆಂದರೆ ಸಾಬೂನು ಕೊಬ್ಬಿನಾಮ್ಲಗಳ ಲವಣ. ಲವಣಗಳೆಂದರೆ ಗೊತ್ತಲ್ಲ ಆಮ್ಲವೊಂದು ಪ್ರತ್ಯಾಮ್ಲದೊಂದಿಗೆ ವರ್ತಿಸಿದಾಗ ಸಿಗುವ ಉತ್ಪನ್ನವೇ ಲವಣ. ಸಸ್ಯ ಅಥವಾ ಪ್ರಾಣಿಜನ್ಯ ಎಣ್ಣೆಗಳು ಸೋಡಿಯಂ ಅಥವಾ ಪೊಟಾಸಿಯಂ ಹೈಡ್ರಾಕ್ಸೈಡಿನೊಂದಿಗೆ ವರ್ತಿಸಿದಾಗ ಸಾಬೂನು ಉತ್ಪತ್ತಿಯಾಗುತ್ತವೆ. ಸೋಡಿಯಂ ಸೋಪ್‌ಗಳು ಘನ ಅಥವಾ ಗಟ್ಟಿ ಸೋಪ್‌ಗಳಾದರೆ ಪೊಟಾಸಿಯಂ ಸೋಪ್‌ಗಳು ಮೃದು ಸಾಬೂನುಗಳು. ಶಾಂಪೂಗಳು ಪೊಟಾಷಿಯಂ ಸೋಪ್‌ಗಳಾದರೆ ಮೈ ತೊಳೆಯುವ ಸಾಬೂನು ಸೋಡಿಯಂ ಸೋಪ್.




ಸೋಡಿಯಂ ಮತ್ತು ಪೊಟಾಸಿಯಂ ಹೈಡ್ರಾಕ್ಸೈಡ್‌ಗಳು ಪ್ರಬಲ ಪ್ರತ್ಯಾಮ್ಲಗಳು ಮತ್ತು ಕೊಬ್ಬಿನಾಮ್ಲಗಳು ದುರ್ಬಲ ಆಮ್ಲಗಳು. ಆದ್ದರಿಂದ ಅವುಗಳಿಂದಾಗುವ ಸಾಬೂನುಗಳು ಪ್ರತ್ಯಾಮ್ಲೀಯ ಗುಣವನ್ನು ಹೊಂದಿರುತ್ತವೆ. ಈ ಸೋಪಿನ ಕಣಗಳ ವಿಚಿತ್ರ ಲಕ್ಷಣವೇ ಅವುಗಳ ಬಳಕೆಯನ್ನು ವ್ಯಾಪಕಗೊಳಿಸಿವೆ. ಸೋಪಿನ ಅಣುಗಳ ಎರಡು ತುದಿಗಳು ವಿಪರೀತ ಅಂದರೆ ವ್ಯತಿರಿಕ್ತ ಗುಣವನ್ನು ಹೊಂದಿವೆ. ಸೋಡಿಯಂ ಅಯಾನ್ ಇರುವ ಭಾಗಕ್ಕೆ ನೀರೆಂದರೆ ಇಷ್ಟ. ನಿಮ್ಮ ಮನೆಯ ಎಮ್ಮೆಯ ಹಾಗೆ ನೀರಿನಲ್ಲಿ ಮಲಗಿದರೆ ಮೇಲೆದ್ದು ಬರುವ ಪ್ರಶ್ನೆಯೇ ಇಲ್ಲ. ಕೊಬ್ಬಿನಾಮ್ಲದ ತುದಿಗೆ ಹುಚ್ಚು ನಾಯಿ ಕಡಿತದ ಹಾಗೆ ನೀರೆಂದರಾಗದು. ಒಂದು ಹನಿ ಸೋಪನ್ನು ನೀರಿನ ಮೇಲೆ ಹಾಕಿದರೆ ಸೋಡಿಯಂನ ತುದಿ ನೀರಿಗೆ ಅಂಟಿಕೊಂಡರೆ ಕೊಬ್ಬಿನಾಮ್ಲದ ತುದಿ ಬಾಲ ಎತ್ತಿ ಓಡುವ ದನದ ಹಾಗೆ ನೀರಿನ ಮೇಲ್ಮೈಯಿಂದ ಮೇಲಕ್ಕೆ ಎತ್ತಿಕೊಂಡಿರುತ್ತದೆ. ಅದೇ ನೀರಿನೊಳಗೆ ಹಾಕಿ ಕಲಕುತ್ತೀರಿ ಎಂದಿಟ್ಟುಕೊಳ್ಳೋಣ. ಆಗ ಕೊಬ್ಬಿನಾಮ್ಲದ ಕಣಗಳು ನೀರಿನಿಂದ ದೂರಕ್ಕೆ ಅಂದರೆ ಕೇಂದ್ರದ ಕಡೆಗೆ ಅಥವಾ ಮತ್ತು ಸೋಡಿಯಂ ನ ತುದಿ ನೀರಿಗೆ ಅಂಟಿಕೊಂಡಂತೆ ಕೋಟೆಯ ಗೋಡೆಯಂತೆ ನಿಂತು ಫುಟ್ಬಾಲಿನಂತ ಗೋಳ ಉಂಟಾಗುತ್ತದೆ. ಇದನ್ನು ಮೈಸೆಲ್ಲೆ ಎನ್ನುತ್ತೇವೆ. ಈ ಕೊಬ್ಬಿನ ಕಣಗಳಿವೆಯಲ್ಲ ಇವುಗಳಿಗೆ ನೀರೆಂದರಾಗದು ಆದರೆ ಕೊಬ್ಬು, ಜಿಡ್ಡು ಗ್ರೀಸ್ ನಂತಹ ವಸ್ತುಗಳೆಂದರೆ ಬಹಳ ಇಷ್ಟ. ಬಟ್ಟೆಯಲ್ಲಿರುವ ಧೂಳು ಮಣ್ಣಿಗೂ ಅಷ್ಟೇ ಈ ಎಣ್ಣೆಯ ಜಿಡ್ಡು ಎಂದರೆ ಇಷ್ಟ. ಅದಕ್ಕೆ ಅಂಟಿಕೊಳ್ಳುತ್ತವೆ. ಈಗ ಈ ಸೋಪಿನಲ್ಲಿರುವ ಎಣ್ಣೆಯ ಬಾಲ ಈ ಜಿಡ್ಡಿಗೆ ಅಂಟಿಕೊಂಡು ಮೈಸಿಲ್ಲೆಗಳನ್ನು ರೂಪಿಸುತ್ತವೆ. ಈಗ ನೀವು ಬಟ್ಟೆಯನ್ನು ಜೋರಾಗಿ ಉಜ್ಜಿದಿರಿ ಎಂದಿಟ್ಟುಕೊಳ್ಳೋಣ ಈ ಮೈಸಿಲ್ಲೆಗಳು ಜಾರಿ ಬಿಡುತ್ತವೆ. ಆಗ ಅವುಗಳು ಧೂಳು ಎಣ್ಣೆಯ ಕಣಗಳನ್ನು ಬಟ್ಟೆಯಿಂದ ಎತ್ತಿಕೊಂಡು ಹೋಗಿಬಿಡುವುದರಿಂದ ಬಟ್ಟೆ ಸ್ವಚ್ಛವಾಗಿಬಿಡುತ್ತದೆ. ಈಗ ನೀರಿನಿಂದ ತೊಳೆದರೆ ಸೋಪಿನ ಮೈಸಿಲ್ಲೆಗಳು ಬಟ್ಟೆಯಿಂದ ದೂರವಾಗುತ್ತವೆ.

ಹೀಗೆ ಒಂದು ತುದಿಗೆ ನೀರೆಂದರೆ ಇಷ್ಟ ಇನ್ನೊಂದಕ್ಕೆ ಎಣ್ಣೆ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಂಬ ಕನ್ನಡದ ಗಾದೆಯ ಹಾಗೆ. ಹೊಂದಾಣಿಕೆ ಆಗದ ಮಿತ್ರತ್ವ ಎನ್ನುತ್ತೇವಲ್ಲ. ಆದರೆ ಇಲ್ಲಿ ಎತ್ತು ಏರಿಗೆ ಎಳೆದು ಕೋಣ ನೀರಿಗೆ ಎಳೆಯುವುದರಿಂದ ಬಟ್ಟೆ ಸ್ವಚ್ಛವಾಗುತ್ತದೆ.

**- ದಿವಾಕರ ಶೆಟ್ಟಿ ಎಚ್,** ಮಂಗಳೂರು

## ಬದುಕು



ಹೇಗಿದೆ ಸಾವಿನ ತಯಾರಿ, ದಿನಾಂಕ ವನ್ನಂತು ನಿಗದಿ ಮಾಡಿಸಿಕೊಂಡಿದ್ದೀರಿ. ಅದರ ನಂತರದ ಕಾರ್ಯಕ್ರಮಗಳು ಹೇಗಿರುತ್ತೋ ನಮಗಂತೂ ಗೊತ್ತಿಲ್ಲ, ಹೇಗಿರಬೇಕು ಅನ್ನುವ ನಿರ್ಧಾರವನ್ನು ನಾವು ಮಾಡುವ ಹಾಗಿಲ್ಲ ಸಾಯುವುದಕ್ಕಿಂತ ಮೊದಲು ಬದುಕು ಹೇಗೆ ಅನ್ನೋದನ್ನ ನಿರ್ಧರಿಸಬಹುದು. ಹಾ ಹೇಳುವುದನ್ನು ಮರೆತಿದ್ದೆ ನಿನ್ನೆ ನೂರು ವರ್ಷ ಬದುಕುವುದು ಹೇಗೆ ಅಂತ ಭಾಷಣ ಮಾಡುತ್ತಿದ್ದವರು ಎದೆ ಒಡೆದು ಸತ್ತು ಹೋಗಿದ್ದಾರೆ, ಬದುಕಿನ ಬಗ್ಗೆ ಏನು ಆಸೆ ಇಲ್ಲದೆ ಆ ದಿನವನ್ನಷ್ಟೇ ಕಳೆಯುತ್ತಿದ್ದವರು ಇನ್ನು ಕೂಡ ಬದುಕಿದ್ದಾರೆ, ದಾರಿ ಬದಿಯ ಅಪಘಾತಗಳು ಹೆಚ್ಚಾಗ್ತಾ ಇದೆ, ಬದುಕಿನ ಆಸೆಗಳು ಇನ್ನೂ ಹೆಚ್ಚಾಗ್ತಾ ಇದೆ, ನಾವು ಪ್ರತಿದಿನ ಸಾವಿಗೆ ಹತ್ತಿರವಾಗ್ತಾ ಇದ್ದೇವೆ, ಹಾಗಾಗಿ ಈ ದಿನವನ್ನು ಬದುಕಿ ಬಿಡೋಣ ಸಾವಿರದಲ್ಲಿ ಇರುವವರು ಲಕ್ಷದ ಬಗ್ಗೆ ಚಿಂತಿಸೋದು ಬೇಡ, ಮತ್ತೊಂದು ಹೇಳೋದನ್ನ ಮರೆತಿದ್ದೆ ತುಂಬಾ ಜನ ಚಿಂತೆಯಿಂದ ಸಾವನ್ನ ಬೇಗ ಬೇಗ ಕರೆಸಿಕೊಳ್ಳುತ್ತಿದ್ದಾರೆ, ಸತ್ತ ಮೇಲೆ ಮತ್ತೆ ಭೇಟಿಯಾಗೋದಕ್ಕೆ ಸಾಧ್ಯವಾಗುವುದಿಲ್ಲ ಬದುಕಿದ್ದಾಗ ಮಾತಾಡೋಣ ಖುಷಿಯಾಗಿರೋಣ ಚೆನ್ನಾಗಿರೋಣ ನಗ್ತಾ ಇರೋಣ ಇನ್ನೇನ್ ಹೇಳೋದು ಬದುಕಿದ್ರೆ ನಾಳೆ ಸಿಗೋಣ ಹೀಗೆಂದ ಮನೋಜ ಓಡಿ ಬಿಟ್ಟ. ಮೊದಲೆಲ್ಲ ಅವನು ಹಾಗಿರಲಿಲ್ಲ, ಒಂದಷ್ಟು ಚಿಂತೆಯಲ್ಲಿ ಇದ್ದವ ಈಗ ಒಮ್ಮಿಂದೊಮ್ಮೆಲೆ ಬದಲಾಗಿದ್ದಾನೆ ಹೇಗೆ ಯಾಕೆ ಅವನಲ್ಲಿಯೇ ಕೇಳಬೇಕು ಕೇಳಿ ಹೇಳ್ತೇನೆ.

**- ಧೀರಜ್** ಬೆಳ್ಳಾರೆ

